9. ಖಾಸಗಿ ಕಾರ್ಯಕಲಾಪ

ಖಾಸಗಿ ಸದಸ್ಯರುಗಳ ನಿರ್ಣಯಗಳು

ವಿಷಯ : ವಿವಾಹ ಕಾರ್ಯಕ್ರಮಗಳಲ್ಲಿ ವೈಭವೀಕರಣವನ್ನು ನಿಲ್ಲಿಸಲು ಹೊಸ ಶಾಸನವನ್ನು ರಚಿಸುವ ಬಗ್ಗೆ.

ಶ್ರೀ ಕೆ.ಆರ್. ರಮೇಶ್ ಕುಮಾರ್ (ಶ್ರೀನಿವಾಸಪುರ) : ಮಾನ್ಯ ಅಧ್ಯಕ್ಷರೇ, ನಾನು ಈ ಕೆಳಕಂಡ ನಿರ್ಣಯವನ್ನು ತಮ್ಮ ಅನುಮತಿ ಕೋರಿ ಸಭೆಯ ಮುಂದೆ ಮಂಡಿಸುತ್ತೇನೆ.

"ಇಡೀ ರಾಜ್ಯಾದ್ಯಂತ ಯಾವುದೇ ವರ್ಗದ, ಮತದ, ಧರ್ಮದ ಜನ ವಿವಾಹ ಕಾರ್ಯಕ್ರಮಗಳನ್ನು ಕುಟುಂಬಗಳಿಗೆ ಸೀಮಿತಗೊಳಿಸುವ ಮೂಲಕ ವ್ಯಾಪಾರೀಕರಣವನ್ನು ವೈಭವಿಕರಣವನ್ನು ನಿಲ್ಲಿಸುವ ದೃಷ್ಟಿಯಿಂದ ಈ ಸದನವು ಒಂದು ಹೊಸ ಶಾಸನವನ್ನು ರಚಿಸಲು ಅವಿರೋಧವಾಗಿ ನಿರ್ಣಯಿಸುತ್ತದೆ"

ಪ್ರಸ್ತಾವ ಮಂಡಿಸಲಾಯಿತು

✝ **ಶ್ರೀ ಕೆ.ಆರ್. ರಮೇಶ್ ಕುಮಾರ್ (ಶ್ರೀನಿವಾಸಪುರ)** : ಮಾನ್ಯ ಅಧ್ಯಕ್ಷರೇ, ಈ ಶಾಸನ ಸಭೆಯ ಒಂದು ವಿಶೇಷ ಗೌರವ ಏನೆಂದರೆ, ನಾವು ಬದುಕಿ ಬಾಳುತ್ತಾ ಇರತಕ್ಕಂಥ ಸಮಾಜದಲ್ಲಿ, ನಮ್ಮ ದಿನನಿತ್ಯದ ಜೀವನದಲ್ಲಿ ಎದುರಾಗತಕ್ಕಂಥ ಕೆಲವು ಸಮಸ್ಯೆಗಳನ್ನು ಸುಧಾರಿಸಿಕೊಂಡು, ಬದುಕನ್ನು ಉತ್ತಮಗೊಳಿಸಲಿಕ್ಕೆ, ಆಗ್ಗಿಂಧಾಗ್ಗೆ ಅಗತ್ಯ ಇರತಕ್ಕಂಥ ಕೆಲವು ಶಾಸನಗಳನ್ನು ರೂಪಿಸತಕ್ಕಂಥ, ಅನುಷ್ಠಾನಕ್ಕೆ ತರತಕ್ಕಂಥ ಜವಾಬ್ದಾರಿ ಈ ಸದನದ ಮೇಲೆ ಇದೆ. ಕೆಲವೊಮ್ಮೆ ಹಲ ಕೆಲವು ಕಾರಣಗಳಿಂದ ಶಾಸನ ಸಭೆ ಆ ಕೆಲಸವನ್ನು ಮಾಡುವುದಕ್ಕೆ ಆಗದೇ ಹೋದರೂ ಕೂಡ, ನಮ್ಮ ನಿಯಮಾವಳಿಗಳ ಪ್ರಕಾರ ನಾವು ಈ ಖಾಸಗಿ ನಿರ್ಣಯಗಳನ್ನು ತರಲಿಕ್ಕೆ ಅವಕಾಶ ಇದೆ. ಕೆಂಪು ನಾರಾಯಣನ ಮುದ್ರಾ ಮಂಜೂಷಿನಲ್ಲಿ ಚಾಣಕ್ಯ, ಚಂದ್ರಗುಪ್ತನಿಗೆ ಹೇಳುತ್ತಾನೆ ನಮ್ಮ ಶತ್ರು ಅಮಾತ್ಯ ರಾಕ್ಷಸ, ಅಮಾತ್ಯ ರಾಕ್ಷಸನನ್ನು ನಾವು ಚಿಂತೆಗೆ ಈಡು ಮಾಡದೇ ಹೋದರೆ. ಅವನನ್ನು ಮುಗಿಸದೇ ಹೋದರೆ, ನಮ್ಮ ಗುರಿ ಸಾಧಿಸುವುದಕ್ಕಾಗುವುದಿಲ್ಲ' ಎಂದು ಅವನನ್ನು ಚಿಂತೆಗೆ ಒಳಪಡಿಸಬೇಕು. ಆಗೊಂದು ಶ್ಲೋಕ ಹೇಳುತ್ತಾನೆ "ಚಿತಾಯುಶ್ಚ ಚಿಂತಾಯಶ್ಚ ಬಿಂದು ಮಾತ್ರಂ ವಿಶೇಷತಿ, ಚಿತಾ ದಹತಿ ನಿರ್ಜೀವಿತಂ, ಚಿಂತಾ ದಹತಿ ಜೀವಿತಂ" ಚಿತೆಗೂ ಚಿಂತೆಗೂ ಒಂದು ಸೊನ್ನೆ ಮಾತ್ರ ವ್ಯತ್ಯಾಸ. ಪಾರ್ಥಿವ ಶರೀರವನ್ನು ಸುಡಲಿಕ್ಕೆ ಚಿತೆ ಮೇಲಿಡುತ್ತೇವೆ. ಚಿಂತೆ ಜೀವಂತವಾಗಿ ಇರುವ ಮನುಷ್ಯನನ್ನು ಸುಡುತ್ತದೆ. ಇವತ್ತು ಈ ದಿವಸ, ಈ ಸಮಾಜದಲ್ಲಿ ಗೌರವದಿಂದ, ಸ್ವಾಭಿಮಾನದಿಂದ, ಮರ್ಯಾದೆಯಿಂದ ಬದುಕಬೇಕು ಎನ್ನತಕ್ಕಂಥ ಜನರಿಗೆ ಈ ವಿವಾಹ ಅನ್ನತಕ್ಕಂಥ ಒಂದು ಕಾರ್ಯಕ್ರಮ ಯಾವುದು ಸಂತೋಷ ಉಂಟು ಮಾಡಬೇಕಾಗಿತ್ತೋ, ಅದು ವಿವಾದವಾಗಿ, ಚಿಂತೆಯಾಗಿ ಪರಿಣಮಿಸಿದೆ. ಮನುಷ್ಯನ ನಾಗರಿಕತೆ ಪ್ರಾರಂಭವಾಗಿ ನದಿ ತೀರದ ಪ್ರದೇಶದಿಂದ ಆತ ಕಲ್ಲನ್ನು ಕೈಯಲ್ಲಿ ಹಿಡಿದುಕೊಂಡು. ಮಾಡುವುದರಿಂದ ಹಿಡಿದು ಬೆಂಕಿ ಉತ್ಪತ್ತಿ ಮಾಡಿ, ಬರಬರುತ್ತಾ ಹಲವು ಹಂತಗಳನ್ನು ಧಾಟಿದ ನಂತರ ಕುಟುಂಬ ವ್ಯವಸ್ಥೆಗೆ ಬರುತ್ತಾನೆ. ಈ ಕುರಿತು ನಾನು ಪೂರ್ಣ ಮಾಹಿತಿಗೆ ಹೋಗುವುದಿಲ್ಲ, ಏಕೆಂದರೆ, ವಿವರಣೆಗೆ ಬಹಳ ಸಮಯ ಬೇಕಾಗುತ್ತದೆ 'ಮದುವೆ' ಎನ್ನುವುದು ಪ್ರಾಪ್ತ ವಯಸ್ಸಿಗೆ ಬರುವ ಒಂದು ಗಂಡು ಮತ್ತು ಹೆಣ್ಣಿಗೆ ಒಟ್ಟಾಗಿ ಜೀವನ ನಡೆಸುವುದಕ್ಕೆ ಅನುಮತಿ ಕೊಡುವ ಒಂದು ಘಟನೆ ಒಂದೊಂದು ಧರ್ಮದಲ್ಲಿ ಒಂದೊಂದು ರೀತಿಯ ವಿವಾಹ ಪದ್ಧತಿಯನ್ನು ಸ್ಥಾಪನೆ ಮಾಡಿಕೊಂಡಿರುತ್ತಾರೆ. ಹಳೆಯ ಕಾಲದಲ್ಲಿ

ಊರ ಜನರ ಮಧ್ಯೆ ಸಂಬಂಧ ಇರತಕ್ಕಂಥವರು ಸೇರಿಕೊಂಡು, ಯಾರ ಮನೆಯೂ ಹಾಳಾಗದಂತೆ, ಸಾಲಸೋಲ ಮೈಮೇಲೆ ಹಾಕಿಕೊಳ್ಳದಂತೆ, ಉಪಾಯದಲ್ಲಿ ಮುಗಿದು ಹೋಗುತ್ತಾ ಇದ್ದಂಥ ಒಂದು ಕೆಲಸಕ್ಕೆ ನಾವು ಬುದ್ಧಿವಂತರಾಗಿ, ಬಹಳ ದೊಡ್ಡ ಮನುಷ್ಯರಾಗಿ, ಇಷ್ಟು ರಂಪ ಮಾಡಿಕೊಂಡಿದ್ದೇವೆ. ನಮ್ಮ ಭಾಗದಲ್ಲಿ ಹೆಣ್ಣು ಕಡೆಯವರು ಮದುವೆ ಮಾಡಬೇಕಾಗಿದ್ದರೆ, ಕೆರೆ ತುಂಬಿದೆಯೇ ಎಂದು ನೋಡುತ್ತಿದ್ದರು. ಏಕೆಂದರೆ ಮದುವೆಗೆ ಭತ್ತ ಬೇಕಲ್ಲಾ ! ಭತ್ತ ಆಗ ಕೊಳ್ಳಲು ಆಗುತ್ತಿರಲಿಲ್ಲ. ಕೆರೆ ತುಂಬಿದರೆ ಹೆಣ್ಣು ಮಗಳೀಗೆ ಲಗ್ನ ನಿಶ್ಚಯ ಮಾಡಿಕೊಳ್ಳಬಹುದು ಎಂಬ ಧೈರ್ಯ ಬರುತ್ತಿತ್ತು. ಮದುವೆಗಾಗಿ ಮೇಜರ್ ಐಟಮ್ ಖರ್ಚಿಗೆ ಬರುತ್ತಿದ್ದುದ್ದು ಅನ್ನದ್ದೇ. ಅಕ್ಕಿ ಅಥವಾ ಭತ್ತ ಕೊಳ್ಳುವುದು ಆಗುತಿರಲಿಲ್ಲ, ಅಕ್ಕಿ ಖರ್ಚು ಒಂದನ್ನು ನಿಭಾಯಿಸಿಕೊಂಡರೆ, ಅರ್ಧ ಮದುವೆ ಆಗಿ ಹೋದಂತೆಯೇ, ಇವತ್ತು ಅದು ಸಾಧ್ಯವೇ ? ಈ ಅಸಹಾಯಕ ಜನ ಏನು ತಪ್ಪು ಮಾಡಿದ್ದಾರೆ ? ಇದನ್ನೆಲ್ಲಾ ಸೇರಿ ಮಾಡತಕ್ಕಂಥವರು ಈ ಸಮಾಜದ ಪ್ರತಿಷ್ಠಿತ ವರ್ಗದವರು, ನನ್ನ ಅಂದಾಜಿಗೆ ಅವರು 5 ಪರ್ಸೆಂಟ್ ಇರಬಹುದು. ಏಕೋ ಮಾನ್ಯ ಸಿಂಧ್ಯಾರವರು ನನ್ನನ್ನೇ ನೋಡುತ್ತಿದ್ದಾರೆ, ಏನೆಂದು ಗೊತ್ತಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ನನ್ನ ಸಲಹೆ ಏನೆಂದರೆ, ಮಾನ್ಯ ರಮೇಶ್ ಕುಮಾರ್‌ರವರು ಹಿರಿಯ ಸದಸ್ಯರಾಗಿದ್ದಾರೆ, ಅಷ್ಟೇ ಅಲ್ಲ, ಅವರು ಅಧ್ಯಕ್ಷರಾಗಿದ್ದವರು, ಅವರು ಕೆಲವು ಮೌಲ್ಯಗಳಿಗೋಸ್ಕರ ಅವರು 1978 ರಿಂದ ಹೋರಾಟ ಮಾಡಿಕೊಂಡು ಬಂದಿದ್ದಾರೆ. ನಾವು ಮತ್ತು ಅವರು 1971–72ರ ವಿದ್ಯಾರ್ಥಿ ದೆಸೆಯಿಂದಲೇ ಸ್ನೇಹಿತರು. ಅದೆಲ್ಲಾ ಸರಿ, ಅವರು ಹೇಳುತ್ತಿರತಕ್ಕಂಥದ್ದನೆನಲ್ಲಾ ನಾನು ಒಪ್ಪುತ್ತೇನೆ. ನಮ್ಮಂತಹ ಪ್ರತಿಷ್ಠಿತ ವ್ಯಕ್ತಿಗಳು ಇಂತಹ ಮದುವೆಗಳಿಗೆ ಹೋಗದಿದ್ದರೆ, automatically, they will die ಅನ್ನುವುದು ನನ್ನ ಅಭಿಪ್ರಾಯ. ನಾವೇ ಇದನ್ನೆಲ್ಲಾ ವೈಭವೀಕರಣ ಮಾಡಿಸಿ ಬಿಟ್ಟಿದ್ದೇವೆ. ನಾವು ಹೋಗದೆ ಹೋದರೆ automatically ಅವೆಲ್ಲಾ ಕಡಿಮೆ ಆಗಿ ಬಿಡುತ್ತವೆ. ನಾವೇ ಎಲ್ಲಾ ಕಡೆಗೂ ಹೋಗುತ್ತೇವೆ, ನಾವೇ ನಿಂತುಕೊಂಡು ಎಲ್ಲಾ ಮಾಡುತ್ತೇವೆ. ನಾನು ಮಾನ್ಯ ರಮೇಶ್‌ಕುಮಾರ್‌ರವರನ್ನು apperciate ಮಾಡುತ್ತೇನೆ. Only two persons are exception. ಒಂದು ಸಿ. ಬೈರೇಗೌಡರು, ಮತ್ತೊಂದು ರಮೇಶ್‌ಕುಮಾರ್‌ರವರು, ಸಿ. ಬೈರೇಗೌಡರು, ಅದು ಅವರ ಮಗನಾದ ಕೃಷ್ಣ ಬೈರೇಗೌಡರ ಮದುವೆಯೋ ಅಥವಾ ಮಗಳ ಮದುವೆಯೋ ಎಂದು ನನಗೆ ಸರಿಯಾಗಿ ನೆನಪಿಲ್ಲ, ಬಹುಶಃ ಅವರ ಮಗಳ ಮದುವೆ ಇರಬೇಕು. ಅವರ ಮಗಳ ಮದುವೆಯನ್ನು ಅವರು ಮಾಡಿದಾಗ, ನನ್ನನ್ನೂ ಸಹ ಅವರು ಕರೆದಿರಲಿಲ್ಲ, ಆಗ ಅವರು ಪಾರ್ಟಿ ಅಧ್ಯಕ್ಷರಾಗಿದ್ದರು, ನಾನು ಆಗ ಸಂಯುಕ್ತ ಜನತಾದಳದ floor leader ಆಗಿದ್ದೆ. ಮಾನ್ಯ ರಮೇಶ್ ಕುಮಾರ್‌ರವರೂ ಕೂಡ ಅಷ್ಟೇ. ಅವರ ಮಗಳು ಬಹಳ ವಿದ್ಯಾವಂತೆ, ವಿದೇಶದಲ್ಲಿ ಓದಿರತಕ್ಕಂಥ ಹೆಣ್ಣು ಮಗಳು. ಅದಕ್ಕೆ ತಕ್ಕಂತೆ ಅವರು ಮದುವೆ ಮಾಡಿದ್ದಾರೆ. ಅವರಿಗೆ ಮಾತನಾಡತಕ್ಕಂತ ನೈತಿಕ ಹಕ್ಕೂ ಸಹಿತ ಈ ವಿಚಾರದಲ್ಲಿದೆ. ಆದರೆ ನಮ್ಮಂತಹವರು ಹೋಗದೇ ಹೋದರೆ automatically ಇವೆಲ್ಲಾ ಕಡಿಮೆಯಾಗುತ್ತವೆ ಎನ್ನುವುದು ನನ್ನ ಅಭಿಪ್ರಾಯ. ಆದ್ದರಿಂದ ನಾನು ಅವರನ್ನು ನೋಡಿದೆ ಅಷ್ಟೇ.

ಶ್ರೀ ಕೆ.ಆರ್. ರಮೇಶ್ ಕುಮಾರ್ : ನೀವು ಹೇಳುವುದೂ ಕೂಡ ಕರೆಕ್ಟೇ. ಅದಕ್ಕೆ ನಾನು ಉತ್ತರವನ್ನೂ ಕೂಡ ಆಗಲೇ ಹೇಳಿಬಿಟ್ಟಿದ್ದೇನೆ. ನಾವು ಹಂಗಿನಲ್ಲಿ ಬದುಕುವವರು. ಉದಾಹರಣೆಗೆ ನೀವು ಮತ್ತು ನಾನು. ನಮಗೇನೂ ಜಾತಿ ಇಲ್ಲ, ಏನೂ ಇಲ್ಲ, ನಮ್ಮ ಮತ ಕ್ಷೇತ್ರಗಳಲ್ಲಿ ಬಹುಸಂಖ್ಯಾತ ಸಮಾಜದವರು ನಮ್ಮ ಎದುರಿಗೆ ನಿಂತುಕೊಂಡಾಗ ನಾವು ಇಲ್ಲಿಗೆ

ಬರಬೇಕಾದರೆ ನಾವು ಏನೇನೆಲ್ಲಾ ಸರ್ಕಸ್‌ಗಳನ್ನು ಮಾಡುತ್ತೇವೆ. ಹೀಗಿರುವಾಗ ಮಾನ್ಯ ಸಿಂಧ್ಯಾರವರೇ, ಅವರು ಮದುವೆಗೆ ಕರೆದರೆ ಹೋಗದಿರುವುದಕ್ಕೆ ನಿಮಗೆ ಧೈರ್ಯವಾಗುತ್ತದೆಯೇ ? ಲಿಂಗೇಗೌಡ ಕರೆದರೂ ಹೋಗಬೇಕು. ಬೋರೇಗೌಡ ಕರೆದರೂ ಹೋಗಬೇಕು. ಅವರಿಗಿಂತ ಮೊದಲು ನೀವು ಛತ್ರದ ಬಳಿಗೆ ಹೋಗಿರಬೇಕು. ಇಲ್ಲದಿದ್ದರೆ ನಿಮ್ಮನ್ನು ಮುಗಿಸಿ ಬಿಡುತ್ತಾರೆ. ನಾವು ಅವರ ಹಂಗಿನಲ್ಲಿ ಬದುಕುತ್ತಿದ್ದೇವೆ.

4.10 ಪಿಎಂ

ಈ ಹಂಗಿನ ಮಧ್ಯೆ adjustment ಮಾಡಿಕೊಂಡು ಒಂದೊಂದು ಸಲ ಈ ರೀತಿ ಹುಚ್ಚರಂತೆ ಧೈರ್ಯ ಮಾಡಿ ಮಾತನಾಡಿಬಿಟ್ಟು ಆಮೇಲೆ ಏನಾದರೂ ಆಗುತ್ತದಾ ಎಂದು ಪ್ರಕಾಶ್‌ರವರಂಥವರ ಹತ್ತಿರ ಸಲಹೆ ಕೇಳಿ ಏನು ಸಾರ್ ಏನಾದರೂ ಆಗಬಹುದಾ, ಏನಾದರೂ ಇದ್ದರೆ ನೀವು ಸ್ವಲ್ಪ compensate ಮಾಡಿ ಎಂದು ಕೇಳಿಕೊಳ್ಳೋದು. ನಮ್ಮ ಪೂರ್ತಿ ಲೈಫೆಲ್ಲಾ ಬರೇ ಭಯ, ಹಂಗು, compromise, adjustment, ಇದರಲ್ಲೇ ನಾವು ಕಳೆಯುತ್ತೇವೆ. ವ್ಯವಸ್ಥೆ ಆ ರೀತಿ ಇದೆ. ಇಷ್ಟಪಟ್ಟು ಯಾರೂ ಹೋಗುವುದಿಲ್ಲ, ಗೃಹಸ್ಥಾಶ್ರಮ ಎಂತಹ ಒಂದು ಶುಭ ಸನ್ನಿವೇಶ ಇದು, ಬಾಲಾವಸ್ಥೆ, ಗೃಹಸ್ಥಾಶ್ರಮ, ವಾನಪ್ರಸ್ತ, ಸನ್ಯಾಸತ್ವ ಇದು ಬದುಕಿನ ಬಹಳ ಮುಖ್ಯ ನೆಲೆಗಟ್ಟು ಮದುವೆ ಎನ್ನತಕ್ಕದ್ದು. ಮೊದಲಿಗೆ ಈ ಸೋದರ ಸಂಬಂಧಗಳಲ್ಲಿ ಲಗ್ನ ಮಾಡಿಕೊಂಡರೆ ಉದ್ದೇಶ ಏನು ಎಂದರೆ ಖರ್ಚು ಕಡಿಮೆ ಬರುತ್ತದೆ. dowry ... ಏನೂ ಇಲ್ಲ, ಒಬ್ಬರಿಗೊಬ್ಬರು ಹೊಂದಿಕೊಂಡು ಹೋಗುತ್ತಾರೆ, ಹಳೆಯ ಪರಿಚಯಗಳು, ಏನೂ ಎಕ್ಸ್‌ಚೇಂಜ್ ವ್ಯವಹಾರ ಬರುವುದಿಲ್ಲ. ಕೆಲವು ಸನ್ನಿವೇಶಗಳಲ್ಲಿ consanguineous marriages ಅದು ಎಂದು ಹುಟ್ಟತಕ್ಕ ಮಕ್ಕಳಿಗೆ ಅಪಾಯವಾಗುತ್ತೆ ಎಂದು It does not happen in all cases. ಈಗ ಮಡುಗ ಹುಡುಗಿಗೆ ಪರಿಚಯವಿರುವುದಿಲ್ಲ. ಹುಡುಗಿಗೆ ಹುಡುಗ ಪರಿಚಯವಿರುವುದಿಲ್ಲ. ಅವರ ಅಪ್ಪ ಅಮ್ಮ ಇವರಿಗೆ ಪರಿಚಯವಿರುವುದಿಲ್ಲ. ಇವರ ಅಪ್ಪಾ ಅಮ್ಮ ಅವರಿಗೆ ಪರಿಚಯವಿರುವುದಿಲ್ಲ. ಫಾರಿನ್‌ನಲ್ಲಿರುವ ಹುಡುಗ ಬಂದು ಇನ್ನೊಂದು ಹೆಣ್ಣುಮಗಳು ಈ ಕಡೆಯಿಂದ ಬಂದು matrimonial centre ನವರು ಮದುವೆ ಫಿಕ್ಸ್ ಮಾಡಿ ಮದುವೆ ಮುಗಿದು ಹೋಗಿಬಿಟ್ಟರೆ ಆ ಹೆಣ್ಣು ಮಗಳಿಗೆ ಇವರು ನನ್ನ ಅತ್ತೆ–ಮಾವ ನನ್ನ ತಂದೆ ತಾಯಿಯವರಿಗೆ ಸಮಾನ ಎನ್ನತಕ್ಕ ಭಾವನೆ ಇರುವುದಿಲ್ಲ. ಇವನು ಒಳ್ಳೆಯವನಾದರೆ ಇವನ ಅಪ್ಪ ಅಮ್ಮನನ್ನು ನೆನಪಿನಲ್ಲಿ ಇಟ್ಟುಕೊಳ್ಳಬಹುದು ಇಲ್ಲದಿದ್ದರೆ ಇವನೂ ಹೆಂಡತಿಯ ಜೊತೆಗೆ ಹೊರಟುಬಿಡಬಹುದು. Social impact ನೋಡಿ, ದುಂದುವೆಚ್ಚ ಇನ್ನೊಂದು. ಮತ್ತೊಂದು ಎನ್ನುವುದರ ಜೊತೆಗೆ, ಮತ್ತು ಎಂಥ ಪಾವಿತ್ರತೆ ಇತ್ತು. ಸಮಾಜ ಹೇಗೆ ಎಂದರೆ, ಇಸ್ಲಾಂ ಧರ್ಮ ಬಹಳ ಕಟ್ಟುನಿಟ್ಟಿನ ಧರ್ಮ, ಅವರು ಕೆಲವು ವಿಚಾರಗಳಲ್ಲಿ ಸಡಿಲವಾಗುವುದೇ ಇಲ್ಲ. ಆದರೆ ಈ ಸಮಾಜದಲ್ಲಿ ನಮ್ಮ ಮಧ್ಯದಲ್ಲಿ ಬದುಕಿದವರಲ್ಲವೆ ? ಅವರಲ್ಲಿ ಮದವೆಗೆ ಬೇರೆ ಪದ್ಧತಿನೇ ಇದೆ. ಹುಡುಗಿಯ ಮುಖ ಹುಡುಗನಿಗೆ ತೋರಿಸುವುದಿಲ್ಲ, ಸಾಕ್ಷಿಗಳು ಇರುತ್ತಾರೆ. ನಿಖಾಃ ವನ್ನು ಏರ್ಪಾಡು ಮಾಡಿದಾಗ ಅವರು ಯಾರು ಬಂದಿರುತ್ತಾರೋ ಉಲೇಮಾಗಳು ಅಥವಾ ಖಾಜಿಸಾಹೇಬರು ನಿಖಾಃ ಓದಿಸುವುದಕ್ಕೆ ಅಲ್ಲಿ ಹುಡುಗನನ್ನು ಕೂರಿಸಿ ಸಾಕ್ಷಿಗಳು ಬರುತ್ತಾರೆ ಆ ಹೆಣ್ಣು ಮಗುವನ್ನು ನೋಡಿ ಮಾತನಾಡಿ ಒಪ್ಪಿಸಿಕೊಂಡು ಹೋಗುವುದಕ್ಕೆ ಒಳಗೆ ಹೋಗಿ ನಾವು ಇಂಥವರ ಪರವಾಗಿ ಬಂದಿದ್ದೇವೆ. ಇಂಥ ಹುಡುಗನಿಗೆ ನಿನ್ನನ್ನು ಲಗ್ನ ಮಾಡುತ್ತಿದ್ದೇವೆ. ಅವರು ಹೀಗೀಗೆ ಇದ್ದಾರೆ ಎಂದು ಹೇಳಿದ ಮೇಲೆ ಆ ಹುಡುಗಿಗೆ ಆಗಲೂ ನಾನು ಒಪ್ಪಿಗೆ

ಕೊಡಲು ಇಲ್ಲವೆ ಕೊಡದಿರಲು choice ಇರುತ್ತದೆ. ಆಕೆ ಸಮ್ಮತಿ ಕೊಟ್ಟಮೇಲೆ ವಾಪಸ್ ಬಂದು declare ಮಾಡಿ ಇಂಥವರ ಮಗಳನ್ನು ಇಂಥ ಹುಡುಗನಿಗೆ ಈಗ ನಿಮ್ಮ ಜೊತೆಗೆ ವೈವಾಹಿಕ ಜೀವನಕ್ಕೆ ನಾನು ಏರ್ಪಾಟು ಮಾಡುತ್ತಿದ್ದೇನೆ. ಅಲ್ಲಾನ ಹೆಸರಿನಲ್ಲಿ ಇದಕ್ಕೆ ಒಪ್ಪಿಗೆ ಇದೆಯೆ ಎಂದು ಕೇಳಿ ಅವರು ಮೂರು ಸಲ ನಾನು ಒಪ್ಪಿಕೊಂಡಿದ್ದೇನೆ. ನಾನು ಒಪ್ಪಿಕೊಂಡಿದ್ದೇನೆ, ನಾನು ಒಪ್ಪಿಕೊಂಡಿದ್ದೇನೆ. ಎಂದು ಹೇಳಬೇಕು. ಅಲ್ಲಿಗೆ ನಿಮ್ಮಿಬ್ಬರನ್ನೂ ಕೂಡ ಸತಿಪತಿಯನ್ನಾಗಿ ನಾನು declare ಮಾಡುತ್ತಿದ್ದೇನೆಂದು ಅವನು ಹೇಳುತ್ತಾನೆ. ಈಗ ಅವರಲ್ಲೂ ವರದಕ್ಷಿಣೆ ಬಂದುಬಿಟ್ಟಿದೆ. ಇಸ್ಲಾಂ ಧರ್ಮದ ಬಗ್ಗೆ ಬಹಳ ದೊಡ್ಡ details ನಾನು collect ಮಾಡಿದ್ದೇನೆ. ಆದರೆ ನಾನು ಅಷ್ಟು ಸಮಯವನ್ನು ತೆಗೆದುಕೊಳ್ಳುವುದಿಲ್ಲ. ಇಸ್ಲಾಂ ಧರ್ಮದ ಮೂಲ ತತ್ವ ಮದುವೆಯಲ್ಲಿ ಅಡಕವಾಗಿರತಕ್ಕದ್ದು ಸತಿಪತಿಯ ಮಧ್ಯ ಮೊದಲನೆಯದು ಕರುಣೆ. ಕರುಣೆಯಿಂದ ಉದ್ಭವವಾಗತಕ್ಕ ಪ್ರೀತಿ, ಪ್ರೇಮ ಅಲ್ಲ, ಕರುಣೆ ಮತ್ತು ಪರಸ್ಪರ understanding ತನ್ಮೂಲಕ ಉದ್ಭವವಾಗತಕ್ಕದ್ದು ಈ ಒಂದು ಪ್ರೀತಿ ಮತ್ತು ಕರುಣೆಯ ಭಾಂದವ್ಯದ ಅಂಗವಾಗಿ ಅವರಿಬ್ಬರನ್ನು ಬಂಧನ ಮಾಡಿ ಇಡಬೇಕು. ಈಗ ಅವರಲ್ಲಿ dowry deaths ಆಗುತ್ತಿದೆ. ಇವತ್ತಿಗೂ ನಮ್ಮಲ್ಲಿ Marriage Act ಗೆ Mohamaden law ಬೇರೆಯೇ ಇದೆ. ಆದರೆ Dowry ಮಾತ್ರ ಅವರಿಗೂ common ಆಗಿ ಅನ್ವಯಿಸುತ್ತಿದೆ. They are not covered by separate law. ಕ್ರಿಶ್ಚಿಯನ್ಸ್‌ನಲ್ಲಿ admittedly 28 ವಿಧಾನಗಳೂ ಇದೆ. ಬೇರೆ ಬೇರೆ, ಒಂದೊಂದು ಭಾಗದಲ್ಲಿ ಒಂದೊಂದು ಪದ್ಧತಿ ಇದೆ. ಅದರ ಅಖೈರು ಉದ್ದೇಶ ಇಷ್ಟೆ. ಇಂಥವರನ್ನು ಇಂಥವರ ಜೊತೆ ಬದುಕುವುದಕ್ಕೆ ನಾವು ಇವತ್ತಿನಿಂದ allow ಮಾಡಿದ್ದೇವೆ. Ceremonise ಮಾಡತಕ್ಕದ್ದು ಆದರೆ ಅವರಲ್ಲಿ ceremonise ಮಾಡದೆ ಕೂಡ ಒಟ್ಟಿಗೆ ಬದುಕಲು ಅವಕಾಶಗಳು ಇದೆ. ಆದರೆ ಇಸ್ಲಾಂ ಧರ್ಮದಲ್ಲಿ ಅದಕ್ಕೆ ಅವಕಾಶ ಇಲ್ಲ. ನಮ್ಮ marriages ಏನಿದ್ದಾವೆ ಫಾರಿನ್‌ಗೆ ಹೋಗತಕ್ಕಂಥ ಮಕ್ಕಳು ಮಾತ್ರ Urgent ಗೆ ಒಂದು sub-registar officeಗೆ ಹೋಗಿ ಒಂದು registration certificate ನ್ನು ತೆಗೆದುಕೊಂಡು ಬರುತ್ತಾರೆ. ಏಕೆಂದರೆ ತೆಗೆದುಕೊಳ್ಳಲು ಕಷ್ಟ ಎಂದು. ಉಳಿದಂತೆ ಇಷ್ಟೆಲ್ಲಾ ದುಬಾರಿಯ್ತಾಗಿ ಖರ್ಚು ಮಾಡಿ ಮದುವೆ ಮಾಡಿದರು ಸಹ they are not getting registered. ಎಷ್ಟು ಕೋಟಿ ರೂಪಾಯಿ ಖರ್ಚು ಮಾಡಿ ಮದುವೆ ಮಾಡಿದರೂ ಕೆಲವು ಸಂದರ್ಭಗಳಲ್ಲಿ safety ಇಲ್ಲ ಆದರೆ ಇಸ್ಲಾಂ ಧರ್ಮದಲ್ಲಿ ಮಸೀದಿಗೆ ಹೋಗಿ ನಿಖಾಃ ಮಾಡಿದಾಗ ಆ list ಗೆ enter ಆಗದಯೆ certify ಆಗದೆ ಮದುವೆಯಾಗಲು ಅವಕಾಶವೆ ಇಲ್ಲ. ಅಲ್ಲಿ ಅವರಿಗೆ every marriage is registered. Safety ಇದೆ ಅವರಿಗೆ, ನಾವೆಲ್ಲರೂ ತಿಳಿದುಕೊಂಡಿರುವಂತೆ ಮೂರು ಸಲ ಎಲ್ಲೋ ಮರದ ಕೆಳಗೆ ನಿಂತುಕೊಂಡು ತಲಾಕ್ ಎಂದು ಹೇಳಿ ಕಳಿಸಿಬಿಡಲು ಆಗುವುದಿಲ್ಲ, ಅಷ್ಟು ಸುಲಭವಲ್ಲ, ನಮ್ಮಲ್ಲಿ ನಾವು ಇಷ್ಟೆಲ್ಲಾ ಮಾಡಿದರೂ ಕೂಡ, ನಾವು ಸಪ್ತಪದಿ ಮಾಡಿಸುವ ವೇಳೆಗೆ ಅವನ ಕೈಯಲ್ಲಿ ಹೇಳಿಸುತ್ತೇವೆ "ಅರ್ಥೇಚ, ಕಾಮೇಚ, ಧರ್ಮೇಚ, ನಾತಿ ಚ ರಾಮಿ, ನಾತೀ ಚ ರಾಮಿ" ಎಂದು ಮೂರು ಸಲ ಹೇಳುತ್ತಾನೆ, ಹಣದ, ಕಾಮದ, ಧರ್ಮದ ಯಾವುದೇ ಕಾರಣ ನೆಪಕ್ಕಾಗಿ ನಾನು ನಿನ್ನನ್ನು ತೊರೆಯುವುದಿಲ್ಲ. ನಾತೀ ಚ ರಾಮಿ, ನಾತೀ ಚ ರಾಮಿ, ನಾತೀ ಚ ರಾಮಿ ಎಂದು ಮೂರು ಸಲ ಹೇಳಬೇಕು. ಅಷ್ಟಾದರೂ ಕೂಡ marriages register ಆಗಿರುವುದಿಲ್ಲ. ನಾವು ಎಷ್ಟೋ marriage ಗಳು marriage ಆಗಿರುವ ಎರಡು ಮೂರು ತಿಂಗಳಿಗೆ Break ಆಗಿರುವುದನ್ನು ನೋಡುತ್ತಿದ್ದೇವೆ. ಬಡವರಲ್ಲಿ

ಆಗತಕ್ಕ marriages break ಆಗುವುದು ಅಪರೂಪ. ಶ್ರೀಮಂತರಲ್ಲಿ ಅದರಲ್ಲೂ ನವ್ಯ ಶ್ರೀಮಂತರಲ್ಲಿ, ರಾತ್ರೋರಾತ್ರಿ ಶ್ರೀಮಂತರಲ್ಲಿ ಆಗತಕ್ಕ ಮದುವೆಗಳು ಸಾಮಾನ್ಯವಾಗಿ break ಆಗುತ್ತದೆ. ಈ ಅದ್ಧೂರಿ ಮದುವೆ ನಮ್ಮನ್ನೇನೂ ಕೆಡಿಸುವುದಿಲ್ಲ, ಅವರಿಗೇ ಅದು ವಿಷವಾಗಿ ಪರಿಣಮಿಸುತ್ತದೆ. ಅವರನ್ನೇ ಹಂತ ಹಂತ ಕಳೆದಂತೆ ಆಹುತಿಯಾಗಿ ತೆಗೆದು ಕೊಳ್ಳುತ್ತಾ ಹೋಗುತ್ತದೆ. ಹೇಳುತ್ತಾ ಹೋದರೆ ಇದಕ್ಕೆ ಮಿತಿಯೇ ಇರುವುದಿಲ್ಲ. ವಾಸ್ತವ್ಯ ವಾಟಾಳ್‌ರವರೂ ಮಾತನಾಡುವವರಿದ್ದಾರೆ. ಆದ್ದರಿಂದ ನಾನು ಸಮಯದ ಪ್ರಜ್ಞೆಯನ್ನಿಟ್ಟುಕೊಂಡು ನಿರ್ಣಯದ ಮೂಲಭೂತ ವಿಷಯಗಳನ್ನು ತಮ್ಮೆದುರು ನಾನು ಪ್ರಸ್ತಾಪ ಮಾಡಬೇಕಾಗಿತ್ತು. ಎಲ್ಲೋ ಒಂದು ಕಡೆಗೆ ಕೃಷಿ ಪ್ರಧಾನವಾದಂಥ ನಮ್ಮ ಸಮಾಜದಲ್ಲಿ, ಕೆಲವರನ್ನು ಬಿಟ್ಟು ಉಳಿದವರೆಲ್ಲ Agriculturನ್ನು ಮಾಡಿಕೊಂಡು ಜೀವನ ಮಾಡುತ್ತಿದ್ದವರು ಒಬ್ಬ ಹೆಣ್ಣುಮಗಳು ಹೊಸದಾಗಿ ಮನೆಗೆ ಸೇರಿದರೆ ಆ ಕುಟುಂಬಕ್ಕೆ man power ಹೆಚ್ಚಾಗುತ್ತಿತ್ತು ಇನ್ನೊಂದಷ್ಟು ಹೆಚ್ಚು ಕೆಲಸವನ್ನು ಮಾಡಿಸುತ್ತಿದ್ದರು. ಅವರ agricultural operations ಗೆ ಅವರ ಸ್ಥಿತಿಗತಿಗೆ ಹೊಂದಿಕೊಂಡು ಸಂಬಂಧಗಳನ್ನು ಮಾಡುತ್ತಿದ್ದರು. ಅವರು ಶಕ್ತಿ ಮೀರಿದ ಕೆಲಸ ಮಾಡುತ್ತಿರಲಿಲ್ಲ. ಚಾಪೆಯನ್ನು ನೋಡಿ ಕಾಲನ್ನು ಚಾಚುತ್ತಿದ್ದರು. ಅವರು ಭಯಸ್ತರು ಎಂದಲ್ಲ. ಚಾಪೆ ನೋಡಿ ಕಾಲನ್ನು ಚಾಚಿ ಬದುಕತಕ್ಕವರು ಕೈಲಾಗದವರು ಎಂದಲ್ಲ, ಮಾನಸ್ತರು ಈಗ ಬದುಕಲು ಆಗುತ್ತಿಲ್ಲ ಆದ್ದರಿಂದ ಶಾಸನ ಬೇಕು, ಮಾನಗೆಟ್ಟವರು ಯಾರಿದ್ದಾರೆ ಇವರು ಮಾನಸ್ತರಿಗೆ ಸವಾಲಾಗಿದ್ದಾರೆ, ಮಾನಸ್ತರ ಬದುಕನ್ನು ಸುಭದ್ರಗೊಳಿಸುವುದಕ್ಕೆ ಈ ಮಾನಗೆಟ್ಟವರನ್ನು ಶಿಕ್ಷಿಸುವುದಕ್ಕೆ ತರಬೇಕೆಂದಿರುವ ಈ ನಿರ್ಣಯಕ್ಕೆ ನೀವೆಲ್ಲಾ ಬೆಂಬಲವನ್ನು ಕೊಡಬೇಕೆಂದು ಹೇಳಿ ನಾನು ತಮ್ಮಲ್ಲಿ ಅತ್ಯಂತ ಕಳಕಳಿಯಿಂದ ವಿನಂತಿಸಿಕೊಳ್ಳುತ್ತಿದ್ದೇನೆ. ಇದೇ ಸಮಸ್ಯೆ ಬಗ್ಗೆ ನಾನು collect ಮಾಡಿರುವ ವಸ್ತು ಮಾತ್ರ ಬಹಳ ಇದೆ. ಸಮಯವನ್ನು ನಾನು ಬಹಳ ತೆಗೆದುಕೊಳ್ಳುತ್ತಿರುವುದರಿಂದ ನಾನು ಮಾತನಾಡಲು ಆಗುತ್ತಿಲ್ಲ. ಬಹುಶಃ ಪ್ರಕಾಶ್‌ರವರು ಸ್ವಲ್ಪ ತಡವಾಗಿ ಬಂದರು, ಅವರು ಮೊದಲೇ ಬಂದಿದ್ದರೆ ಅವರು ನಮಗೆ ಹೆಚ್ಚು ಪೂರಕವಾಗಿ contribute ಮಾಡುತ್ತಿದ್ದರು ಎಂಬ ವಿಶ್ವಾಸವಿದೆ. ಇಂಥ ಸನ್ನಿವೇಶದಲ್ಲಿ ದಿವಂಗತ ಜೆ.ಹೆಚ್. ಪಟೇಲರನ್ನು ನಾನು ನೆನಪು ಮಾಡಿಕೊಳ್ಳುತ್ತೇನೆ. ವೈಚಾರಿಕಾವಾಗಿ ಇಂತಹ ವಿಚಾರಗಳು ಬಂದಾಗ, ಸಾರ್ವಜನಿಕ ಸಭೆಗಳಲ್ಲಾಗಲಿ, ಶಾಸನ ಸಭೆಗಳಲ್ಲಾಗಲಿ, ಬಹಳ ಅರ್ಥಗರ್ಭಿವಾದಂತಹ ಹಾಗೂ ಪರಿಣಾಮಕಾರಿಯದಂತಹ ಮಾತುಗಳನ್ನು ಆಡತಕ್ಕಂತಹ ಜೈತನ್ಯವನ್ನು ಹೊಂದಿದ್ದರು. ಈ ಖಾಸಗಿ ನಿರ್ಣಯಗಳ ಮೂಲ ಉದ್ದೇಶವನ್ನು ನಾನು ತಮಗೆ ಹೇಳಿದೆ, ಸರ್ಕಾರ ತನ್ನ ಬಿಡುವಿಲ್ಲದ ಕಾರ್ಯಕ್ರಮಗಳ ಮಧ್ಯೆ ಎಷ್ಟೋ ಶಾಸನಗಳನ್ನು ತಂದರೂ ಕೆಲವು ವಿಚಾರಗಳು ಕಣ್ಣು ತಪ್ಪಿ ಹೋಗುತ್ತವೆ. ಕೆಲವು ಸನ್ನಿವೇಶಗಳಲ್ಲಿ ಕೆಲವು ಮುಜುಗರಗಳೂ ಇರುತ್ತವೆ. ಜನ ಪ್ರತಿನಿಧಿಗಳಾಗಿ ನಾವು ಸರ್ಕಾರಕ್ಕೂ ಕೂಡ ಸಹಾಯ ಮಾಡತಕ್ಕಂತಹ ರೀತಿಯಲ್ಲಿ ಮತ್ತೆ ನಮ್ಮನ್ನು ಇಲ್ಲಿಗೆ ಕಳುಹಿಸತಕ್ಕಂತಹ ಬಹುತೇಕ ಜನರ ಭಾವನೆಗಳನ್ನು ಸದನದ ಮುಖಾಂತರ ಅಧಿಕೃತವಾಗಿ ಸರ್ಕಾರಕ್ಕೆ ಮುಟ್ಟಿಸುವುದಕ್ಕೆ ಈ ಅವಕಾಶಗಳನ್ನು ನಾವು ಉಪಯೋಗಿಸಿಕೊಳ್ಳತಕ್ಕಂಥ ಪ್ರಯತ್ನವನ್ನು ಮಾಡುತ್ತೇವೆ. ನಾನು ತಮ್ಮಲ್ಲಿ ಮತ್ತು ತಮ್ಮ ಮುಖಾಂತರ ಸರ್ಕಾರದಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ. ಕರ್ನಾಟಕ ರಾಜ್ಯಾದ್ಯಂತ ಯಾವುದೇ ಮದುವೆಯಾಗಲಿ, ಅವರು ಯಾವುದೇ ಧರ್ಮ, ಮತ ಮತ್ತು ಕುಲಕ್ಕೆ ಸೇರಿರಲಿ ಅವರ ಸಾಂಪ್ರದಾಯಿಕ ವಿಚಾರದಲ್ಲಿ ನಾವು ಪ್ರವೇಶ ಮಾಡದಂತೆ, ಕೇವಲ ಅವರ ಅತ್ಯಂತ ಆತ್ಮೀಯ ಕುಟುಂಬಗಳಿಗೆ ಸೀಮಿತಗೊಳಿಸಿ ಎರಡುನೂರು

ಜನರಿಗಿಂತ ಹೆಚ್ಚಿಗೆ ಇರಲಾರದೆ ಶಾಸ್ತ್ರೋಕ್ತವಾಗಿ, ಅವರ ಧರ್ಮ ಶಾಸ್ತ್ರ ಏನಿದೆ ಅದರ ಪ್ರಕಾರ ನಡೆಯಬೇಕು.

ಶ್ರೀ ವಾಟಾಳ್ ನಾಗರಾಜ್ : ಹಿಂದೆ ಅತಿಥಿ ನಿಯಂತ್ರಣ ಕಾಯಿದೆ ಎಂದು ಇತ್ತು. ಆಗ ಹೆಚ್. ಎಂ. ಚನ್ನಬಸಪ್ಪನವರು ಮಂತ್ರಿಯಾಗಿದ್ದಾಗ ಹಿರಿಯ ಸಚಿವರು ಅವರು ತಮಗೆಲ್ಲಾ ಗೊತ್ತಿರಬಹುದು. ಅವರು ಅವರ ಮಗಳ ಮದುವೆ ಮಾಡುವಾಗ ಈ ಆ್ಯಕ್ಟನ್ನು ಜಾರಿ ಮಾಡಬೇಕೆಂದು ದೊಡ್ಡ ಗಲಾಟೆಯಾಯಿತು. 1972ರಲ್ಲಿ ಈ ಆ್ಯಕ್ಟ್ ಇತ್ತು. ಈಗ ಆ ಆ್ಯಕ್ಟ್ ತೆಗೆದಿದ್ದೀರೋ ಇಲ್ಲವೋ ಗೊತ್ತಿಲ್ಲ. ಅದನ್ನು ನಾವು ಬಹಳ ಹುಡುಕುತ್ತಿದ್ದೇವೆ.

ಶ್ರೀ ಕೆ.ಆರ್. ರಮೇಶ್ ಕುಮಾರ್ : 1972ರಲ್ಲಿ ಭೀಕರ ಬರಗಾಲ ಬಂದಾಗ ಗೆಸ್ಟ್ ಕಂಟ್ರೋಲ್ ಆ್ಯಕ್ಟ್ ತಂದು ಸಾರ್ವಜನಿಕ ಸಭೆ ಸಮಾರಂಭಗಳಲ್ಲಿ ಎಲ್ಲಿಯೂ ಕೂಡ ಹೆಚ್ಚು ಜನ ಈ ಔತಣಕೂಟಗಳನ್ನು ಮಾಡಬಾರದು ಎಂದು ಈ ಆ್ಯಕ್ಟ್‌ನ್ನು ಮಾಡಿದರು. ಆಗ ಚನ್ನಬಸಪ್ಪನವರು ಲೋಕೋಪಯೋಗಿ ಸಚಿವರಾಗಿದ್ದರು. ಕೆಲವರು ಅದನ್ನು ರದ್ದು ಮಾಡಿದರು. ಎಫ್ ಎಮ್ ಖಾನ್ ಅವರೆಲ್ಲಾ ಹೋಗಿ ಅದನ್ನು ಡೆಮಾನ್‌ಸ್ಟೇಷನ್ ಮಾಡಿದರು. ಅಧ್ಯಕ್ಷರೆ, ನಾನು ಈಗ ಏನು ಹೇಳುತ್ತೇನೆ. ಈ ತರಹ ಗೆಸ್ಟ್ ಕಂಟ್ರೋಲ್ ಆ್ಯಕ್ಟ್ ಅದು ಇದು ಎಂದು ಇಂಡೈರೆಕ್ಟಾಗಿ ತರಬೇಕಾಗಿಲ್ಲ. ನೇರವಾಗಿ ವಿವಾಹಗಳನ್ನು ಸರಿಳೀಕರಣಗೊಳಿಸುವ ಶಾಸನ ಎಂದು ಅಥವಾ ನೀವು ಏನು ಟೈಟಲ್ ಕೊಡುತ್ತೀರೋ ಕೊಡಿ, ಎರಡುನೂರು ಜನರಿಗಿಂತ ಮೇಲ್ಪಟ್ಟು ಜನ ಸೇರುವುದಕ್ಕೆ ಅವಕಾಶ ಕೊಡಬಾರದು. ಶಾಸನ ರೂಪಿಸಿ ಶಾಸನಬದ್ಧವಾಗಿ ಮಾಡಬೇಕೆಂದು ನಾನು ಸಲಹೆ ಕೊಡುತ್ತಿದ್ದೇನೆ.

† **ಶ್ರೀ ವಾಟಾಳ್ ನಾಗರಾಜ್** : ಮದುವೆಗೆ ಜನ ಸೇರುವುದನ್ನು ನಿಯಂತ್ರಣ ಮಾಡಬೇಕಾ ಅಥವಾ ಮದುವೆ ವೈಭವೀಕರಣ ಎಂದರೆ, ಬರೀ ಊಟವೇ ವೈಭವೀಕರಣವಾ ? ಲಾಡು, ಪಾಯಸ, ಚಿತ್ರನ್ನಾ ಊಟ ಅದರಲ್ಲೇ ವೈಭವೀಕರಣವೇ, ಅಥವಾ ಚಿನ್ನ, ಬೆಳ್ಳಿ ವಜ್ರ, ವೈಡೂರ್ಯ, ಕಿವಿ ಮೂಗುತಿ, ಕಣ್ಣು ಮೂಗುತಿ, ಕಾಲು ಮೂಗುತಿ ಅವು ಇವು, ಚೈನು ಇವೆಲ್ಲಾ ವೈಭವೀಕರಣವೇ ಅಥವಾ ಸೀರೆ ಒಂದು ಸೀರೆಗೆ 40,000 ರೂ 50,000 ರೂ ಎರಡು ಲಕ್ಷ ರೂ, ಮೂರು ಲಕ್ಷ ರೂ 10 ಲಕ್ಷ ರೂ, ಅದು ವೈಭವೀಕರಣವೇ, ಅಥವಾ ಮೊದಲು ವರದಕ್ಷಿಣೆ ಎನ್ನುತ್ತಿದ್ದರು ಈಗ ಅದು ವರ ಪೂಜೆ, ವರಪೂಜೆ ದಿನವೇ ವರನಿಗೆ ಸ್ವಲ್ಪ ಹೆಚ್ಚು ಕಡಿಮೆ ಯಥೇಚ್ಛವಾಗಿ ಯಾರ್ಯಾರು ಎಷ್ಟೆಷ್ಟು ಹೊಡೆದಿರುತ್ತಾರೆ ಅಷ್ಟು ಯಥೇಚ್ಛವಾಗಿ ಕೊಡಬಹುದು. ಪರ್ಸೆಂಟೇಜ್ ಫಿಕ್ಸ್ ಮಾಡುವುದು. ಯಾರ್ಯಾರು ರಸ್ತೆಯಲ್ಲಿ ಹೊಡೆದಿರುತ್ತಾರೆ. ಸೇತುವೆಯಲ್ಲಿ ಹೊಡೆದಿರುತ್ತಾರೆ. ಅಬಕಾರಿಯಲ್ಲಿ ಹೊಡೆದಿರುತ್ತಾರೆ. ಯಾವ ಯಾವ ದಿಕ್ಕಿನಲ್ಲಿ ಹೊಡೆದಿರುತ್ತಾರೆ. ಆಯಾಯಾ ದಿಕ್ಕಿನಲ್ಲಿ ಅವರು ವರ ಪೂಜೆಯಲ್ಲಿ ಕೊಡುತ್ತಾರೆ. ಅದು ವೈಭವೀಕರಣವಾಗಿದೆ. ಊಟಕ್ಕೆ ಏನೂ ವೈಭವೀಕರಣ ಬರುವುದಿಲ್ಲ. ಸ್ವಲ್ಪ ಒಳ್ಳೆಯ ಚೆನ್ನಾಗಿ ಸುಂದರವಾದ ಊಟ ಕೊಡಬಹುದು. ದೊಡ್ಡ ಬಾಳೆ ಎಲೆ ಹಾಕಿ 20 ತರಹ ಪಲ್ಯ, ಅದು ಇದು ಹಾಕಿ ಒಟ್ಟು ರುಚಿ ರುಚಿಯಾಗಿ ಕೊಟ್ಟರೆ ಒಂದು ನಿಮಿಷಕ್ಕೆ ನಾವು ತಿಂದು ಮತ್ತೆ ಊಟ ಕೇಳುವುದಕ್ಕಾಗುವುದಿಲ್ಲ. ಅದು ವೈಭವೀಕರಣ ಅಲ್ಲ. ನನ್ನ ದೃಷ್ಟಿಯಲ್ಲಿ ವೈಭವೀಕರಣ ಎಂದರೆ, ಇಡೀ ಶರೀರದ ತುಂಬಾ ಶರೀರವನ್ನು ಹೊರಲಾರದಷ್ಟು ಕತ್ತಿನ ಚೈನು, ಕಾಲು ಚೈನು, ಮೂಗುತಿ, ಕಾಲುತಿ, ಕೈತಿ ಬೇಕಾದಷ್ಟು ಹಾಕಿಕೊಂಡು ಹೊರಲಾರದೆ, ಇವರ ಪ್ರದರ್ಶನವನ್ನು ಆ ಮನೆಯವರು ನೋಡಬೇಕು. ಈ ಮನೆಯವರು ನೋಡಬೇಕು, ನನ್ನ ಕೈ ನೋಡಬೇಕು, ನನ್ನ ಸೊಂಟ ನೋಡಬೇಕು, ಡಾಬು, ಆ ಕಿರೀಟ, ಅದು ವೈಭವೀಕರಣವೇ ?

ಶ್ರೀಮತಿ ಭಾಗೀರಥಿ ಮರುಳಸಿದ್ದನಗೌಡ : ಕೈ ಚೈನು ಮೂರುವರೆ ಸಾವಿರ, ನಲವತ್ತು ಸಾವಿರದ ಕೋಟು ಅದೆಲ್ಲಾ ವೈಭವೀಕರಣ ಅಲ್ಲವಾ, ಬರೀ ಮಹಿಳೆಯರ ಬಗ್ಗೆ ಹೇಳುತ್ತಿದ್ದೀರಿ. ನಮಗಿಂತ ಚೆನ್ನಾಗಿ ನಿಮಗೆ ಗೊತ್ತಿದೆ ಎಂದು ನನಗೆ ಬಹಳ ವಿಷಾದವಾಗುತ್ತಿದೆ.

ಶ್ರೀ ವಾಟಾಳ್ ನಾಗರಾಜ್ : ನಾನು ಒಪ್ಪುತ್ತೇನೆ. ಮೊದಲು ಮಹಿಳೆಯರದ್ದು. ಆ ನಂತರ ಪುರುಷರದು. ಎಂತಹ ಸೂಟು, ಒಳ್ಳೆಯ ಉಲನ್ ಬೇಕು. ಅದಕ್ಕೆ ಹೊಲಿಯುವ ಕೂಲಿಯೇ 25,000 ರೂಪಾಯಿ, ಅದಕ್ಕೆ ತಕ್ಕಂತೆ ಟೈ, ಅದಕ್ಕೆ ತಕ್ಕಂತೆ ಷೂಸ್, ಅದಕ್ಕೆ ತಕ್ಕಂತೆ ಕಾಲು ಚೀಲ. ಅದು ಎಷ್ಟಿರಬೇಕು. ಹೇಗೆ ಇರಬೇಕು. ಯಾವ ತರಹ, ಅದನ್ನು ಒಂದು ಬೆಳ್ಳಿ ತಟ್ಟೆಯಲ್ಲಿ ಅವರು ಶಕ್ತಿಯಾನುಸಾರ ಚಿನ್ನದ ತಟ್ಟೆ ಅಥವಾ ಬೆಳ್ಳಿ ತಟ್ಟೆಯಲ್ಲಿ ಯಾವ ತಟ್ಟೆಯಲ್ಲಿ ಬೇಕಾದರೂ ಅದನ್ನು ಇಟ್ಟು ಕೊಡಬಹುದು. ಇದು ವರ ಪೂಜೆ ಒಂದು ಕಡೆ. ಪಂಚೆ, ಕಚ್ಚೆ, ಪಾದರಕ್ಷೆಗೆ ಹಾಕು ಹಣದಲ್ಲಿ ಚನ್ನಪಟ್ಟಣದ ಹತ್ತಿರ ದೇವಸ್ಥಾನದಲ್ಲಿ ಮದುವೆ ಆಗಿ ಹೋಗುತ್ತದೆ. ನಾವು ಬರೀ ಪಾದರಕ್ಷೆಗೆ ಖರ್ಚು ಮಾಡುವುದು ಅಷ್ಟಾಗುತ್ತದೆ. ಕೆಲವರು ಮದುವೆಯಲ್ಲಿ ಗಿಲೀಟ್ ಮಾಡಿ ಕೊಟ್ಟ ಪಾದರಕ್ಷೆಗಳನ್ನು ಬೀರುಗಳಲ್ಲಿ ಇಟ್ಟುಕೊಂಡಿದ್ದಾರೆ. ಇದು ನನ್ನ ಮದುವೆಯ ಕಾಲದಲ್ಲಿ ಕೊಟ್ಟಿದ್ದು. ಇದಕ್ಕೆ ಚಿನ್ನದ ಸೆರಗು ಹಾಕಲಾಗಿದೆ. ಬೆಳ್ಳಿ ಸೆರಗು ಹಾಕಲಾಗಿದೆ ಎಂದು ಇದನ್ನು ನೋಡಿ ವೈಭವೀಕರಿಸುವುದಕ್ಕಾಗಿ ಇಟ್ಟಿರುತ್ತಾರೆ. ವೈಭವೀಕರಣದ ಬಗ್ಗೆ ಊಟದ ಖರ್ಚು ನಿಲ್ಲಿಸಿ ಎಂದು ನೀವು ಹೇಳುತ್ತಿದ್ದೀರಿ. ಊಟದ ಖರ್ಚು ಅಷ್ಟು ದೊಡ್ಡದೇನಲ್ಲ. ನಾವು ನೀವು ಹೋಗಿ ಕೂತು ಊಟ ಮಾಡಿದರೆ ಮೂರು ಮುಕ್ಕಾಲು ರೂಪಾಯಿಗೆ ನಾವು ಊಟ ಮಾಡಲಾರೆವು. ಆದರೆ ನಮ್ಮ ಶರೀರದ ಮೇಲಿರುವಂತಹ ಶರೀರದ ತೂಕ ನಮ್ಮದು 50 ಕೇಜಿ ತೂಕ ಇದ್ದರೆ 75 ಕೇಜಿ ಬಂಗಾರ, ಬೆಳ್ಳಿ, ವರ್ಜ. ಹಾಕಿ ಎಳೆಯಲಾರದೆ, ಕಚ್ಚೆ, ಪಂಚೆ, ಪ್ರತಿ ದಿವಸ ಕಚ್ಚೆ ಹಾಕುವುದಿಲ್ಲ, ಮದುವೆ ದಿವಸವೇ ಕಚ್ಚೆ ಹಾಕಬೇಕು, ಮದುವೆ ದಿವಸವೇ ಶಲ್ಯ ಹಾಕಬೇಕು, ಮದುವೆ ದಿವಸವೇ ಖಿಟ್ಟ, ಮದುವೆ ದಿವಸವೇ ಒಳ್ಳೆಯ ಸೀರೆ ಹಾಕಬೇಕು, ಮದುವೆ ದಿವಸವೇ ಕಾಲುಂಗುರ, ಇವೆಲ್ಲಾ ವೈಭವೀಕರಣ ಒಂದು ಕಡೆ. ಇದು ಪ್ರದರ್ಶನ. ಪ್ರದರ್ಶನವಲ್ಲದೆ ನನ್ನ ಅಳಿಯ ಚೆನ್ನಾಗಿರಬೇಕೆಂದು ಮಾಡುತ್ತಾರೆ. ವರದಕ್ಷಿಣೆ ಎನ್ನುವ ಪದ ಅದು ಇತ್ತೀಚೆಗೆ ಬಹಳ ಕೆಟ್ಟದು. ವರದಕ್ಷಿಣೆ ಎಂದರೆ ವರಪೂಜೆ. ವರಪೂಜೆ ಎನ್ನುವ ಹೆಸರೇ ಅನಾಗರೀಕವಾದುದು. ವರ ಎಂದರೆ ಅವನೇನು ದೇವರೇ? ನಾವೇನು ಪೂಜೆ ಮಾಡುತ್ತೇವಾ ? ವರ ಪೂಜೆ ಎಂದರೆ ದುಡ್ಡು ಕೊಡುವುದು. ನನ್ನ ಮಗಳಿಗೆ ಕೊಟ್ಟಿದ್ದು ಅಲ್ಲದೆ ದುಡ್ಡು ಬೇರೆ ಕೊಡಬೇಕು. ದುಡ್ಡು ವೈಭವ ಇದೆಲ್ಲಾ ಏನಿದೆ. ಈ ತರಹ ವೈಭವೀಕರಣವೇ ಅಥವಾ ಅವರವರಲ್ಲೇ ಮೊದಲು ಒಂದು ಅಂಡರ್‌ಸ್ಟ್ಯಾಂಡಿಂಗ್ ಮಾಡಿಕೊಂಡಿರುತ್ತಾರೆ. ಏನು ಬಹಿರಂಗ ಮಾಡುವುದು ಬೇಡ. ಗಂಡಿಗೆ ಇಷ್ಟು, ಹೆಣ್ಣಿಗೆ ಇಷ್ಟು ಹೆಣ್ಣಿಗೆ ನಾವೇನು ಕೊಡುತ್ತೇವೆ, ಗಂಡಿಗೆ ನಾವೇನು ಕೊಡುತ್ತೇವೆ, ಕಾರು ಯಾವುದು ಬೆಂಜ್ ಕಾರು ಯಾವುದು, ಈ ತರಹ ಅವರ ಅಂತಸ್ತಿಗೆ ತಕ್ಕಂತೆ ಮಾಡುತ್ತಾರೆ. ಇದನ್ನು ತಪ್ಪಿಸುವುದಕ್ಕೆ ಏನಾದರೂ ಕ್ರಮ ತೆಗೆದುಕೊಳ್ಳಬೇಕು. ನನ್ನ ದೃಷ್ಟಿಯಲ್ಲಿ ನಾವು ಎಷ್ಟು ಊಟ ಮಾಡಬಹುದು ? ಒಂದು ಮೈಸೂರು ಪಾಕ್ ತಿನ್ನುತ್ತೇವಾ ? ಒಂದು ಜಹಂಗೀರ್ ತಿನ್ನುತ್ತೇವಾ ? ಏನಾದರೂ ಒಂದು ತಿನ್ನುತ್ತೇವೆ. ಒಂದು ಬಾಳೆ ಹಣ್ಣು ತಿನ್ನಬಹುದು. ಎರಡು ಬೀಡಾ ಹಾಕಿಕೊಳ್ಳಬಹುದು, ಸ್ವಲ್ಪ ಚಿತ್ರನ್ನಾ ಜಾಸ್ತಿ ತಿನ್ನಬಹುದು. ಇದು ಬಿಟ್ಟಾರೆ, 500 ಜನರಿಗೆ ಊಟ ಹಾಕಿದರೆ, 500 ಜನ ಇಲ್ಲಿ ಊಟ ಮಾಡಿದವರು ಮತ್ತೆ ಇನ್ನೊಂದು ಮನೆಯಲ್ಲಿ ಊಟ ಮಾಡುವುದಕ್ಕೆ ಹೋಗುವುದಿಲ್ಲ.

ಅದು ಎಲ್ಲೋ ಒಂದು ಕಡೆ ಉಳಿತಾಯವಾಗಿದೆ. ಇಲ್ಲೂ ಊಟ ಮಾಡಿ ಅಲ್ಲಿಯೂ ಊಟ ಮಾಡುವುದಿಲ್ಲ. ಅದು ಒಂದು ಊಟದ ವ್ಯವಸ್ಥೆ ನಾವೆಲ್ಲಾ ಶಾಸಕರು ಬಂದಿದ್ದೇವೆ, ಒಬ್ಬ ಮಂತ್ರಿಗಳು ಊಟಕ್ಕೆ ಹಾಕುತ್ತಾರೆ ಅದು ವೈಭವೀಕರಣವಾ ? ಅದು ಸಕ್ಕರೆ ಕಾಯಿಲೆ ಇದ್ದವರಿಗಂತೂ ದೇವರೇ ಗತಿ. ನೀವು ಕೊಡುವ ಸ್ವೀಟ್ ತಿಂದರೆ ದೇವರೇ ಕಾಪಾಡಬೇಕು. ವೈಭವೀಕರಣದ ಚಿತ್ರ ಏನು ನಾನು ಬಹಳ ದೊಡ್ಡ ಶ್ರೀಮಂತ ಎಂದು ಅನ್ನಿಸಿಕೊಳ್ಳುವುದಕ್ಕೆ ಇದನ್ನು ಮಾಡುತ್ತಾರೆ. ಅದರಲ್ಲಿ ನಮಗೆ ಗೊತ್ತಿರುವ ಹಾಗೆ 500 ಕೋಟಿ ರೂಪಾಯಿ ಖರ್ಚು ಮಾಡಿ ಮೊನ್ನೆ ಒಂದು ಮದುವೆ ಆಯಿತು. ಬಿಹಾರದಲ್ಲಿ ನಮ್ಮ ಈಗಿನ ಕೇಂದ್ರ ರೈಲ್ವೆ ಮಂತ್ರಿಗಳಾಗಿರುವವರು ಮಾಡಿದಂತಹದ್ದು ವೈಭವೀಕರಣ, ಜಯಲಲಿತಾರವರು ಮಾಡಿದಂತದ್ದೂ ಕೂಡ ವೈಭವೀಕರಣವೇ, ಮದುವೆ ಸಮಯದಲ್ಲಿ 200 ಜನರಿಗೆ ಊಟಕ್ಕೆ ಹಾಕುವುದನ್ನೇ ವೈಭವೀಕರಣ ಎನ್ನುವುದು ಬೇಡ. ಮಿಕ್ಕಿದ್ದು ಯಾವ್ಯಾವುದು ವೈಭವೀಕರಣ ಎಂಬುದನ್ನು ತಾವು ಪಟ್ಟಿ ಮಾಡಿ ಹೇಳಬೇಕು.

ಶ್ರೀ ಕೆ.ಆರ್. ರಮೇಶ್ ಕುಮಾರ್ : ಇವರು ಮಾತಿಗೆ ನಿಲ್ಲುವ ಜನ ಅಲ್ಲ. ಒಟ್ಟಿಗೇ ನಿನ್ನೆ ಎಲ್ಲಾ ಮಾತನಾಡಿ. Resoulation ತರೋಣ ಎಂದು ಹೇಳಿ, ನಾನು ನಿರ್ಣಯ ಮೂವ್ ಮಾಡಿದ ಮೇಲೆ.

ಶ್ರೀ ಜಗದೀಶ್ ಶೆಟ್ಟರ್ : ಅವರು ಮಾತಿನಲ್ಲಿ ವೈಭವೀಕರಣ ಮಾಡಿದರು.

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ರಮೇಶ್ ಕುಮಾರ್‌ರವರೇ, ಇಷ್ಟೊತ್ತು ನೀವು ಇಲ್ಲಿ ಭಾಷಣ ಮಾಡಿದ್ದು ವ್ಯರ್ಥವಾಯಿತಲ್ಲಾ ! ಜೊತೆಗೆ ಕಟ್ಟಿಕೊಂಡು ನಿರ್ಣಯ ಮೂವ್ ಮಾಡಿದ್ದೀರಿ. ಆದರೆ ಅವರು ಈಗ ನಮ್ಮ ಪರವಾಗಿ ಬಿಟ್ಟರು.

ಶ್ರೀ ಕೆ.ಆರ್. ರಮೇಶ್ ಕುಮಾರ್ : ಅದಕ್ಕೇ ದೊಡ್ಡವರು ಹೇಳಿದ್ದು 'ಬಾಯಿ ಇದ್ದವರು ಬರಗಾಲದಲ್ಲಿ ಬದುಕಿದರು' ಎಂದು. ಅಷ್ಟು ದೊಡ್ಡ ಬಾಯಿ ನನಗಿಲ್ಲ ಏನೋ ಮೆತ್ತಗೆ ಹೇಳುವಂತಹ ಮನುಷ್ಯ ನಾನು. ಅವರು ಬಂದು ಒಂದೇ ಸಮ ಢಮಢಮ ಅಂತ ಬಾರಿಸಿಯೇ ಬಿಟ್ಟರು. ಇದನ್ನೇ ಬೇಡ ಎಂದು ಹೇಳುವುದು. ನೀವು ಗಂಡು ಕಡೆಯವರು ಆದರೆ. ಹೆಣ್ಣು ಕಡೆಯವರ ಗತಿ ಏನು ಸ್ವಾಮಿ ? ಮಾನ್ಯ ವಾಟಾಳರೇ, ನಾನೇನು ಹೇಳುತ್ತಿದ್ದೆ ಎಂದರೆ, ಅಕ್ರಮವಾಗಿ, ಆಕ್ಷೇಲವಾಗಿ ಸಂಪತ್ತನ್ನು ಗಳಿಸತಕ್ಕಂಥವರು, ಅದನ್ನು ವ್ಯಯ ಮಾಡಲಿಕ್ಕೆ ಇದೊಂದು ಮಾರ್ಗ ಇಟ್ಟುಕೊಂಡಿದ್ದಾರೆ. ತಮ್ಮ ಸಂಪತ್ತನ್ನು ಪ್ರದರ್ಶನ ಮಾಡುತ್ತಾರೆ. ನಮ್ಮಂಥವರನ್ನೆಲ್ಲಾ ಅಲ್ಲಿಗೆ ಕರೆದು ಸಾಕ್ಷಿಗಳಾಗಿ ಮಾಡಿಕೊಳ್ಳುತ್ತಾರೆ. ಹಂಗಿನಿಂದ ಬದುಕುವವರಾದ ನಾವು ಈ ಹಾಳು ರಾಜಕಾರಣದ ಓಟಿನಿಂದ ವಿಧಿಯಿಲ್ಲದೆ ಹೋಗ್ಬುತ್ತೇವೆ. ನಮ್ಮದೆಲ್ಲಾ ಅದೇ ಕೆಲಸವೇ, ನಮ್ಮನ್ನೆಲ್ಲಾ ಫೋಟೋದೊಳಗೆ ಹಿಡಿದು ಹಾಕಿರುತ್ತಾರೆ ಎಂದೆಲ್ಲಾ ನಾನು ಹೇಳಿದೆ, ತಾವು ಸ್ವಲ್ಪ ತಡವಾಗಿ ಬಂದಿರಿ. ವೈಭವೀಕರಣದಲ್ಲಿ ಛತ್ರ, ಊಟ, ಹೂವಿನ ಅಲಂಕಾರ, ಆರ್ಕೆಸ್ಟ್ರಾ ಅಡಿಗೆಯವರು ಯಾರು ? ಅವನಿಗೆ ಎಷ್ಟು ಲಕ್ಷ ಕೊಟ್ಟಿದ್ದರು? ಆರ್ಕೆಸ್ಟ್ರಾದಲ್ಲಿ ಹಾಡುವವರು ಯಾರು ? ಅವರಿಗೆ ಎಷ್ಟು ಕೊಟ್ಟಿದ್ದರು ? ಇವೆಲ್ಲವೂ ವೈಭವೀಕರಣವೇ, ಏಕೆಂದರೆ, ನ್ಯಾಯವಾಗಿ ಈ ದೇಶದ ಕಾನೂನನ್ನು ಗೌರವಿಸಿ ಬದುಕತಕ್ಕಂಥ ಮನುಷ್ಯನಿಗೆ ಸಾಧ್ಯವಾಗದೇ ಇರತಕ್ಕಂಥದ್ದನ್ನು, ಕಾನೂನಿನ ಪರಿವೆಯೇ ಇಲ್ಲದೆ ನಿರ್ಲಜ್ಜಿತನಾಗಿ ಆಸ್ತಿ ಗಳಿಸಿರುವಂತಹವನು ಇದನ್ನೆಲ್ಲಾ ಮಾಡಿದಾಗ. ಅವನ ಸ್ವಾಭಿಮಾನಕ್ಕೆ ಇವನು ಸವಾಲ್. ಆದುದರಿಂದ ಇದೆಲ್ಲಾ ವೈಭವೀಕರಣ ನಡೆಯಬಾರದು ಎಂದು ಶಾಸನ ರೂಪಿಸಬೇಕೆಂದು ನಾನು ಸಲಹೆ ಕೊಡುತ್ತಿದ್ದೇನೆ. ಇನ್ನು ಛತ್ರದ ವಿಚಾರ ಹೇಳುವುದಾದರೆ, ಅವನು ಒಂದು ಲಕ್ಷ ಅಲ್ಲದಿದ್ದರೆ ಹತ್ತು

ಲಕ್ಷ ಬಾಡಿಗೆ ಕೊಟ್ಟುಕೊಳ್ಳಲಿ, ನನಗೇನೂ ಕಷ್ಟ ಇಲ್ಲ. ಆದರೆ ಆ ಛತ್ರದಲ್ಲಿ ಮದುವೆ ಆಗಬೇಕಾಗಿದ್ದರೆ. ಅಲ್ಲಿ compulsory ಆಗಿ ನಮ್ಮ state representative ಒಬ್ಬರು ಇರಬೇಕು. Income Tax ಇಲಾಖೆಯವರೊಬ್ಬರು ಅಲ್ಲಿ ಇರಬೇಕು. ಅಲ್ಲಿ ಯಾರು ಛತ್ರವನ್ನು ಬುಕ್ ಮಾಡುತ್ತಾರೋ, ಅವರು ಛತ್ರ ಬುಕ್ ಮಾಡುವುದಕ್ಕೆ ಮೊದಲೇ ನಾನು Income tax assesse, ನನ್ನ PAN ನಂಬರ್ ಇದು. ನಾನು ಇಷ್ಟು ತೆರಿಗೆ ಕಟ್ಟುತ್ತಿದ್ದೇನೆ. ನನ್ನದು ಇಂತಹ ಉದ್ಯೋಗ, ನನಗೆ ಈ ಹಣವನ್ನು ಕಟ್ಟುವುದಕ್ಕೆ ಶಕ್ತಿ ಇದೆ ಎಂಬುದನ್ನು ಸಾಬೀತು ಪಡಿಸಿ ಛತ್ರ ಬುಕ್ ಮಾಡಲಿ. ಅದಕ್ಕೆ ನನ್ನದೇನೂ ಆಕ್ಷೇಪಣೆ ಇಲ್ಲ. ಇಲ್ಲದಿದ್ದರೆ, ಅಲ್ಲಿಂದ ಹಾಗೆ ನೇರವಾಗಿ ಅವರು ಎನ್‌ಕ್ವೈರಿಗೆ ಹೋಗಬೇಕಾಗುತ್ತದೆ. ಧೈರ್ಯ ಮಾಡಲಿ, ಆಗ ಯೋಚನೆ ಮಾಡೋಣ. ನಮಗೆ ಸಂಪನ್ಮೂಲಗಳಿಲ್ಲ ಎಂದು ಹೇಳುತ್ತಿದ್ದೇವಲ್ಲಾ ಇಂತಹ ಗಿರಾಕಿಗಳೆಲ್ಲಾ ಸಿಕ್ಕಿದರೆ, ಇವರಿಗೊಂದಿಷ್ಟು ಟ್ಯಾಕ್ಸ್ ಹಾಕೋಣ. ಒಂದು ವೇಳೆ ಚೌಲ್ಟ್ರಿಗಳವರು ಗಲಾಟೆ ಮಾಡಿದರೆ, ಬೇಡ್ರಪ್ಪ ಬಿಟ್ಟು ಬಿಡಿ. ನಿಮಗೆ ಕಷ್ಟ ಬೇಡ ಪಾಪ ಎನ್ನೋಣ. ಅದನ್ನು ಹಾಸ್ಟೆಲ್ಲೋ, ಅನಾಥಶ್ರಮವೋ, ಇನ್ನೊಂದಕ್ಕೋ, ಮತ್ತೊಂದಕ್ಕೋ ಅಥವಾ ಸರ್ಕಾರಿ ಬಿಲ್ಡಿಂಗ್‌ಗಳಿಗಾಗಿ ಎಂದು ಇಟ್ಟುಕೊಳ್ಳೋಣ. ಆ ಬನ್ನೇರಘಟ್ಟ ರಸ್ತೆಗೆ ಹೋದರೆ, ದುಃಖ ಉಮ್ಮಳಿಸಿಕೊಂಡು ಬರುತ್ತದೆ. ಆದರೂ ಅದನ್ನೆಲ್ಲಾ ಬಚ್ಚಿಟ್ಟುಕೊಂಡು. ವಿಧಿಯಿಲ್ಲದೆ ಆ ಮದುವೆಗಳಿಗೆ ಹೋಗಿ ನಗಬೇಕಾಗುತ್ತದೆ. ವಾಟಾಳರೇ, ನೀವು ಇನ್ನೊಂದನ್ನು ಹೇಳುವುದಕ್ಕೆ ಮರೆತಿರಿ. Marriage Bureaus or Matrimonial Centres ಈಗ ಪ್ರಾರಂಭವಾಗಿವೆ. ಹೆಣ್ಣು ಮಕ್ಕಳು ಅವರ ಫೋಟೋ ಮತ್ತು ಅವರ resume ಪೂರ್ಣ ಅಲ್ಲಿ ಕೊಟ್ಟು ಬಿಡುತ್ತಾರೆ. ಗಂಡು ಮಕ್ಕಳೂ ಸಹ ಅಲ್ಲಿ ಕೊಡುತ್ತಾರೆ. Match makers ಇವರು. ಅದಕ್ಕೆ ಇವರಿಗೆ ಕಮಿಷನ್. ಹೆಣ್ಣು ಕಡೆಯವರು ಇಷ್ಟು. ಗಂಡು ಕಡೆಯವರು ಇಷ್ಟು ಎಂದು ಕಮಿಷನ್ ಕೊಡಬೇಕು. ಇದನ್ನು ಮೊದಲಿಗೆ ನಾವು ಯಾವುದಕ್ಕೆ ಮಾಡುತ್ತಿದ್ದೆವು ಎಂದರೆ, ನಾನು ಸಣ್ಣ ಹುಡುಗ ಇದ್ದಾಗ, ನಾನು ವ್ಯವಸಾಯ ಮಾಡಿಕೊಂಡು ಬರುತ್ತಿದ್ದೆ. ಎತ್ತುಗಳನ್ನು ತೆಗೆದುಕೊಳ್ಳಬೇಕಾದರೆ ಆಗ ನಾವು ಜಾತ್ರೆಗೆ ಹೋಗುತ್ತಿದ್ದೆವು. ಜಾತ್ರೆಯಲ್ಲಿ ಎತ್ತನ್ನು ವ್ಯಾಪಾರ ಮಾಡಬೇಕಾದರೆ ನಾವು ಬ್ರೋಕರ್‌ಗೆ ದುಡ್ಡು ಕೊಡುತ್ತಿದ್ದೆವು. ಈಗ ಮದುವೆ ಅನ್ನುವುದು ಗೂಳಿ ವ್ಯಾಪಾರಕ್ಕೆ ಬಂದು ನಿಂತಿದೆ. ಜಾತ್ರೆಯಲ್ಲಿ ಗೂಳಿ ಮತ್ತು ಎತ್ತು ಕೊಂಡುಕೊಳ್ಳಬೇಕಾಗಿದ್ದರೆ. ಬ್ರೋಕರ್‌ಗೆ ಹೇಗೆ ನಾವು ದುಡ್ಡು ಕೊಟ್ಟು. ಅವನು ಅವನಿಗೆ ಹೇಳುವುದನ್ನು ಅವನಿಗೆ ಹೇಳಿ, ನಮಗೆ ಹೇಳುವುದನ್ನು ನಮಗೆ ಹೇಳಿ, ಹೋಗಿ, ಹಿಡ್ಕೊಂಡು ಹೋಗುತ್ತಾ ಇರಿ ಸ್ವಾಮಿ, ಹಿಂದಕ್ಕೆ ತಿರುಗಬೇಡಿ, ಬೆಳಿಗ್ಗೆ ಎದ್ದ ಘಳಿಗೆ ಚೆನ್ನಾಗಿದೆ. ಅದೃಷ್ಟ, ಬಂಗಾರದಂಥ ಎತ್ತು ಸಿಕ್ಕಿತ್ತು ಎಂದು ನಮಗೆ ಹೇಳುವುದು, ಏಯ್ ಬಿಡಯ್ಯ, ಇವತ್ತೇನೋ ನಸೀಬು ನಿಂದು, ಕಾಲಿನಲ್ಲಿ ಐಬು ಇರುವಂತಹ ಎತ್ತಿಗೆ ಇನ್ನೆಷ್ಟು ದುಡ್ಡು ಕೊಡುತ್ತಾರೆಂದು ಅವನಿಗೆ ಹೇಳಿ, ಏನೋ ಒಂದು ಸೆಟ್ಲ್ ಮಾಡಿ, ನಮ್ಮಿಬ್ಬರ ಕಡೆಯಿಂದಲೂ ಕಮಿಷನ್ ತೆಗೆದುಕೊಂಡು ಜೇಬಿಗೆ ಇಟ್ಟುಕೊಳ್ಳುತ್ತಿದ್ದ. ನಂತರ ಅವನು ಮೂರನೇ ವ್ಯಾಪಾರಕ್ಕೆ ಹೋಗುತ್ತಿದ್ದ. ಅದಕ್ಕೂ ಇದಕ್ಕೂ ವ್ಯತ್ಯಾಸ ಏನು ಹೇಳಿ? ಜಾತ್ರೆಯೊಳಗೆ ಎತ್ತಿನ ವ್ಯಾಪಾರಕ್ಕೆ ಕಮಿಷನ್ ತೆಗೆದುಕೊಳ್ಳುತ್ತಿದ್ದಂತಹವನಿಗೂ, ಈ Marriage bureau centresನಲ್ಲಿ ಕಮಿಷನ್ ತೆಗೆದುಕೊಳ್ಳುವಂತಹನಿಗೂ ವ್ಯತ್ಯಾಸವೇನು? ನಾವು ಪ್ರಾಣಿಗಳ ಜೊತೆಗೆ ಬಂದು ಬಿಟ್ಟಿವಲ್ಲಾ ! ನಾವು rational ಆಗಿ ಮುಂದೆ ಹೋಗುತ್ತಿದ್ದೇವೆ ಎಂದು ನಾವೆಂದುಕೊಂಡರೆ, ಈಗ ಕಂಪ್ಯೂಟರ್ ಬಂತು, ಎಲ್ಲಾ ಬಂತು, ಇನ್ನೊಂದು ಬಂತು, ಮನುಷ್ಯ Mars ಮೇಲೆ ಏನಿದೆ ಎಂದು ತಿಳಿದುಕೊಳ್ಳುವುದಕ್ಕೆ ಹೋಗಿ, ವಾಪಸ್ಸು ಬಂದು ಸ್ಥಿತಿ

ಇಲ್ಲಿಗೆ ಬಂದು ಬಿಟ್ಟಿತಲ್ಲಾ ಅನ್ನತಕ್ಕಂಥ ದುಃಖ. ಒಂದು ಊಟ. ಇನ್ನೊಂದು, ಅವರು ಯಾವುದೇ ಧಾಟಿಯಲ್ಲಿ ಹೇಳಿದರೂ ಕೂಡ, ಮದುವೆಯ ನೆಪದಲ್ಲಿ ದೊಡ್ಡ ಸಮಾರಂಭ ಆಗುವುದಕ್ಕೆ ಅವಕಾಶ ಇರಕೂಡದು. ಅದು ಬಹಳ ನಿಕಟ ಸಂಪರ್ಕ ಇರತಕ್ಕಂಥ ಕುಟುಂಬಗಳಿಗೆ ಮಾತ್ರ ಸೀಮಿತವಾಗಿರಬೇಕು. ಉಳಿದಂತೆ ಗುಟ್ಟಾಗಿ ಅವರು ಅವರ ಮಕ್ಕಳ ಮೇಲಿನ ಆಸೆಗೆ ಏನು ಕೊಡುತ್ತಾರೆ? ಏನು ತೆಗೆದುಕೊಳ್ಳುತ್ತಾರೆ ಎನ್ನುವುದು ಖಾಸಗಿ ವಿಚಾರ, ನಮಗೆ ಗೊತ್ತಾಗುವುದಿಲ್ಲ. ಡೌರಿ ತಡೆಗಟ್ಟಲಿಕ್ಕೆ ಈಗಾಗಲೇ ಒಂದು ಶಾಸನ ಇದೆ, ನಾವು ಪುನಃ ಅದನ್ನು ಹೆಚ್ಚು ಪರಿಣಾಮಕಾರಿಯಾಗಿ ಉಪಯೋಗಿಸಿಕೊಳ್ಳುವಂತೆ ಇಲ್ಲಿ ಹೇಳಬೇಕು. ನಾನು ಹೇಳುತ್ತಿರತಕ್ಕಂಥದ್ದು. ಅಕ್ರಮವಾಗಿ ಗಳಿಸಿದ ಸಂಪತ್ತನ್ನು ವ್ಯಯ ಮಾಡುವುದಕ್ಕೆ ಇರತಕ್ಕಂಥ ಮಾರ್ಗಗಳಿಗೆ incentives ಏನಿದೆ. ಪ್ರೋತ್ಸಾಹಗಳು ಏನಿವೆ. ಅದನ್ನು ಕಡಿಮೆ ಮಾಡುವುದಕ್ಕೆ ಇದೊಂದು ಮಾರ್ಗವಾಗುತ್ತದೆ. ಇವರಿಗೆ ಏನು ಫೆನಾಲ್ಟಿ ಹಾಕಬೇಕೋ, ಇನ್ನೊಂದು ಹಾಕಬೇಕೋ, ಅದರ ಬಗ್ಗೆ ನಾನೇನೂ ಹೇಳುವುದಿಲ್ಲ. ನಾನು ನನ್ನ ಮನಸ್ಸಿನಲ್ಲಿ ಇದ್ದಂತಹ ವೇದನೆಯನ್ನೂ, ನನ್ನಲ್ಲೇ ಕೆಲಸ ಮಾಡುತ್ತಿದ್ದಂತಹ ಒಂದು ಅಲೋಚನೆಯನ್ನು ಈ ಸಭೆಯ ವಸ್ತುವಾಗಿ ಮಂಡಿಸಿದ್ದೇನೆ. ಅನೇಕ ಜನ ಬಂದಿದ್ದಾರೆ. ಯಾರ್ಯಾರಲ್ಲಿ ಯಾವ್ಯಾವ ಶಕ್ತಿ ಅಡಗಿದಯೋ ನಮಗೆ ಗೊತ್ತಿಲ್ಲ. ಅವರನ್ನೆಲ್ಲಾ ಇನ್ನೂ ನಾವು ಪರೀಕ್ಷೆಗೇ ಒಡ್ಡಿಲ್ಲ. ಎಲ್ಲರೂ ಭಾಗವಹಿಸಬೇಕು. ಬಹುಶಃ ನಾನು ಹೇಳಿರತಕ್ಕಂಥ ಎಲ್ಲಾ ವಿಚಾರಗಳನ್ನು ಇನ್ನೂ ಇಂಪ್ರೂವ್ ಮಾಡಿ ಹೇಳತಕ್ಕಂಥವರು ಇರಬಹುದು. ಇನ್ನೂ ಹಿರಿಯರು, ಅನುಭವಸ್ಥರು, ನಮ್ಮಷ್ಟೇ ಇನ್ನೂ ಹೆಚ್ಚಿನ ಕಳಕಳಿ ಇರತಕ್ಕಂಥವರೂ ಕೂಡ ನಮ್ಮ ಸಂಗಾತಿಗಳಾಗಿ ಇದ್ದಾರೆ. ಈ ಸೆಷನ್ ಪ್ರಾರಂಭವಾದಾಗಿನಿಂದ ಈ ಸಭೆಯಲ್ಲಿ ಹೆಣ್ಣು ಮಕ್ಕಳು, ನಮ್ಮ ಶ್ರೀಮತಿ ಶೆಟ್ಟಿಯವರು questions ಹಾಕಿದಾಗ ಎದ್ದು ಮಾತನಾಡುವುದನ್ನು ಬಿಟ್ಟರೆ, ಏಳುತ್ತಲೇ ಇರಲಿಲ್ಲ ಇವತ್ತು ಹಾಗೂ ಹೀಗೂ ಏನೋ ಪ್ರಯತ್ನ ಮಾಡಿ ತನ್ನಷ್ಟಕ್ಕೆ ತಾನೇ ನಮ್ಮ ಸಹೋದರಿಯಾದ ಭಾಗೀರಥಿಯವರು ಎದ್ದು ನಿಂತುಕೊಳ್ಳುವಂತಾಯಿತು. ಇದರಿಂದ ನನಗೆ ಖುಷಿಯಾಯಿತು. ನಾವು ಇವತ್ತು 80% ಈ resoulation ತಂದಿದ್ದಕ್ಕೆ ಸಾರ್ಥಕವಾಯಿತು.

ಶ್ರೀಮತಿ ಕೆ. ಭಾಗೀರಥಿ ಮರುಳಸಿದ್ದನಗೌಡ : ನೀವು ಹೇಳಿದ್ರೆ ನಾವು ದಿನಾ ಗಲಾಟೆ ಮಾಡುತ್ತಿದ್ದೆವು ಸಾರ್.

ಶ್ರೀ ಕೆ.ಆರ್. ರಮೇಶ್ ಕುಮಾರ್ : ಹೌದಮ್ಮ, ನೀವು ಮಾತನಾಡಬೇಕೆಂಬುದೇ ನಮ್ಮ ಆಸೆ. ನೀವಾಗಲಿ, ಪರಿಮಳಮ್ಮವರಾಗಲಿ ಮಾತನಾಡಬೇಕೆಂದು ಆಸೆ ಪಡುವವರು ನಾವು ನೀವು ನಮ್ಮ ಸಹೋದರಿಯರು. ನಮಗಿಂತ ಬದುಕಿನ ಕಷ್ಟ, ಕುಟುಂಬದ ಕಷ್ಟ, ಸಮಾಜದ ವಿಚಾರ ನಿಮಗೆ ಹೆಚ್ಚು ಪರಿಚಯ ಇರುತ್ತದೆ. ನಾವಾದರೂ ಮಾತಿನ ಕಲೆಯನ್ನು ಮೈಗೂಡಿಸಿಕೊಂಡು, ನಾಟಕೀಯವಾಗಿ ಹೇಳತಕ್ಕಂಥವರು. ನೀವು ಹೇಳತಕ್ಕಂಥ ಮಾತುಗಳು ಹೆಚ್ಚು ನೈಜವಾಗಿರುತ್ತವೆ. ಸತ್ಯವಾಗಿರುತ್ತವೆ. ನೀವು ಹೇಳಬೇಕೆಂಬುದೇ ನಮ್ಮ ಆಸೆ. ನಮ್ಮನ್ನು ಸಾಕಿ ಬೆಳೆಸಿದಂತಹವರು, ಹೇಗೆ ಅವರು ನಮ್ಮನ್ನು ಬೆಳೆಸಿದರು. ನಮ್ಮ ಮಕ್ಕಳನ್ನು ನಾವು ಹೇಗೆ ಸಾಕಿ ಬೆಳೆಸಿದ್ದೇವೆ ಈ ಕಲುಷಿತ ವಾತಾವರಣದಲ್ಲಿ, ಪರಿಸರದಲ್ಲಿ ವೈಯಕ್ತಿಕ ಜೀವನದಲ್ಲಿ ಸ್ವಲ್ಪ ಶಿಸ್ತು ಇಟ್ಟುಕೊಂಡು ಆ ಶಿಸ್ತನ್ನು ಮಕ್ಕಳಿಗೂ ವರ್ಗಾಯಿಸಿ ಬದುಕಬೇಕಾಗಿದ್ದರೆ. ಬಹಳ ನರಕ, ಅದು ಬಹಳ ದೊಡ್ಡ ಶಿಕ್ಷೆ. ಅನೇಕ ಜನ ಹೇಳಿಕೊಳ್ಳುವುದಕ್ಕೆ ಆಗದೇ ಈ ನೋವಿನಿಂದ ನರಳುತ್ತಿದ್ದಾರೆ. ನಾನಿನ್ನೂ ಹೆಚ್ಚು ಲಂಬಿಸುವುದಿಲ್ಲ. ಇಲ್ಲಿಗೆ ಮುಕ್ತಾಯ ಮಾಡುತ್ತೇನೆ. ಹಿರಿಯ ಸದಸ್ಯರಾದಂತಹ ವಾಟಾಳ್

ನಾಗರಾಜ್ ರವರು. ಅವರಿಗೇನೂ ತಯಾರಿ ಬೇಕಾಗಿಲ್ಲ, ಯಾವುದೇ ವಿಷಯದ ಮೇಲೆ ಬೇಕಾಗಿದ್ದರೂ ಕೂಡ, ಅವರ ಅನುಭವದ ಹಿನ್ನೆಲೆಯಲ್ಲಿ ಆ ತಕ್ಷಣಕ್ಕೆ ಎದ್ದು ಸಲಹೆ ಕೊಡತಕ್ಕಂಥ ಒಂದು ಚೈತನ್ಯವನ್ನು ಅವರು ಸಂಪಾದನೆ ಮಾಡಿಕೊಂಡಿದ್ದಾರೆ. ಇದು ಹೇಗಾಯಿತು ಎಂದರೆ, ನಾನೊಂದು resoluation ಕೊಟ್ಟಿದ್ದೆ. ಅವರೊಂದು resoluation ಕೊಟ್ಟಿದ್ದರು. ಅವರ resoluation ಮೊದಲು ಬಂದು ಬಿಟ್ಟಿತು. ನನ್ನದು ಎರಡನೆಯದು ಆಯಿತು. ಆಗ ನಾನು ಅವರ ಹತ್ತಿರ ಹೋಗಿ ರಾಜಿ ಮಾಡಿಕೊಂಡೆ. ನಿಮ್ಮ resoluationಗೆ ನಾನು ಸಹಿ ಹಾಕುತ್ತೇನೆ. ನನ್ನ resoulationಗೆ ನೀವು ಸಹಿ ಮಾಡಿ, ನಾನು ಬಹಳ ಹೊತ್ತು ತೆಗೆದುಕೊಳ್ಳುವುದಿಲ್ಲ. ಮೊದಲು ನನ್ನದು ತೆಗೆದುಕೊಳ್ಳೋಣ. ಅನಂತರ ನಿಮ್ಮದು ತೆಗೆದುಕೊಳ್ಳೋಣ ಎಂದೆ. ನಾನು ಅಧ್ಯಕ್ಷನಾಗಿದ್ದಗಲೂ ಕೂಡ ಅಷ್ಟೇ. ಇಲ್ಲೊಂದು ವಿಷಯ ಇದೆ, ಪ್ರಶ್ನೆಗಳು, ನಿರ್ಣಯಗಳು, ಯಾವುದು ವಾಟಾಳರ ಹೆಸರಿನಲ್ಲಿದ್ದರೂ ಕೂಡ, ಲಾಟರಿಯಲ್ಲಿ ಯಾವಾಗಲೂ ಅವರದೇ ಬರುತ್ತಿತ್ತು. ಅದು ಏನು ಎಂದು ಗೊತ್ತಿಲ್ಲ. ನಾನು ಬಹಳಷ್ಟು ಸಲ ಕಂಟ್ರೋಲ್ ಮಾಡುವುದಕ್ಕೆ ಟ್ರೈ ಮಾಡ್ದೆ.

ಶ್ರೀ ವಾಟಾಳ್ ನಾಗರಾಜ್ : ಇಲ್ಲ, ಪ್ರಾಮಾಣಿಕವಾಗಿ ಇದೊಂದು ಏನೋ ಒಂದು ಬಂಧನ ಇದು. ಇದು ನನಗೂ ಗೊತ್ತಿರಲಿಲ್ಲ. ನನ್ನ ಹಿಂದೆ ಬಂದರು. ಇಂತಹ ಒಂದು ನಿರ್ಣಯವನ್ನು ನಾನು ತರುತ್ತಿದ್ದೇನೆ ಎಂದರು. ಕರ್ನಾಟಕದ ಪರಿಸ್ಥಿತಿ ಏನು ಎಂಬ ಬಗ್ಗೆ ಸಮಗ್ರ ಕರ್ನಾಟಕದ ಬಗ್ಗೆ ನಾವು ನಿರ್ಣಯ ಕಳುಹಿಸಿದ್ದೇವೆ.

4.40 ಪಿಎಂ

ನನ್ನದು ಮೊದಲನೆಯ ನಿರ್ಣಯ ಬರುವ ವ್ಯವಸ್ಥೆ ಇತ್ತು. ಇದು ಎರಡನೆಯ ನಿರ್ಣಯ ಆಗುತ್ತದೆಂದು ಸೂಚನೆ ಬಂದಾಗ ನನ್ನ ಹತ್ತಿರ ಬಂದರು. ನಾನು ಅವರ ಮಾತನ್ನು ತಳ್ಳಿ ಹಾಕುವ ಪರಿಸ್ಥಿತಿ ಇರಲಿಲ್ಲ. ನನ್ನ ಮಾತನ್ನು ಅವರು ತಳ್ಳಿ ಹಾಕುತ್ತಿರಲಿಲ್ಲ. ಅಷ್ಟು ನಮ್ಮ ಹಾಗೂ ಅವರ ಬಾಂಧವ್ಯ. ಮತ್ತು ಇದು ಬಹಳ ಪ್ರಾಮುಖ್ಯ ಕೂಡ ಇತ್ತು. ನನ್ನ ನಿರ್ಣಯ ಕೂಡ ಪ್ರಾಮುಖ್ಯ. ಆಗ ಒಂದು ತೀರ್ಮಾನಕ್ಕೆ ಏನು ಬಂದೆವು ಎಂದರೆ ಇದು ಒಂದು ತರಹ ಮದುವೆ. ಒಂದು ತೀರ್ಮಾನಕ್ಕೆ ಬಂದು ನೀವು ನನ್ನ ನಿರ್ಣಯಕ್ಕೆ ನಾವಿಬ್ಬರೂ ಒಪ್ಪಿಕೊಂಡು ಸಹಿ ಹಾಕೋಣ ನಿಮ್ಮ ನಿರ್ಣಯಕ್ಕೆ ಸಹಿ ಹಾಕೋಣ ಎಂದು ಇವತ್ತು ಮೊದಲನೆಯದಾಗಿ ಮದುವೆ ನಿರ್ಣಯವನ್ನು ತೆಗೆದುಕೊಂಡು ಹೇಳಿದಾಗ ಆ ತೀರ್ಮಾನದಂತೆ ಅವರು ಮೊದಲು ಮಾತನಾಡಿದ್ದಾರೆ. ನಾನು ಒಂದು ನಿಮಿಷ ಅದನ್ನು ಮುಂದಿನ ವಾರ ಮುಂದುವರೆಸುತ್ತೇನೆ. ಬಹಳ ವಿಚಾರ ಇದೆ. ಅದರ ನಂತರ ಇನ್ನೊಂದು ವಿಚಾರವನ್ನು ತಮ್ಮ ಗಮನವನ್ನು ತರುತ್ತೇವೆ.

ಶ್ರೀ ಕೆ.ಆರ್. ರಮೇಶ್ ಕುಮಾರ್ : ಅವರು ಒಪ್ಪಿಗೆ ಕೊಟ್ಟರು. ಆದರೆ ಮದುವೆ ಸ್ವಲ್ಪ ಬೇಗ ಆಗಿದ್ದರೆ ಚೆನ್ನಾಗಿ ಇರುತ್ತಿತ್ತು. ಅಧ್ಯಕ್ಷರು ಮದುವೆ ಬಹಳ ತಡವಾಗಿ ಮಾಡಿದರು. ಶುಕ್ರವಾರ ನಾವು ಬೆಳಿಗ್ಗೆ ಒಂದು ಗಂಟೆಯೊಳಗೆ ಬರುತ್ತದೆಂದು ಹೇಳಿ ತಿಳಿದಿದ್ದೆವು.

ಶ್ರೀ ವಾಟಾಳ್ ನಾಗರಾಜ್ : ಇಲ್ಲಿ ಮದುವೆ ಬಗ್ಗೆ ಬಹಳ ವ್ಯವಸ್ಥಿತವಾಗಿ ಚರ್ಚೆ ನಡೆಯುತ್ತಿದೆ ಬಹಳ ಕಡಿಮೆ ಸದಸ್ಯರು ಇದ್ದು ಎಲ್ಲರೂ ಊರಿಗೆ ಹೊರಟು ಹೋಗಿದ್ದಾರೆ. ಮದುವೆ ಮನೆಯಲ್ಲಿ ಇಷ್ಟೇ ಜನರು ಊಟಕ್ಕೆ ಬರಬೇಕೆಂದು ನಿಯಂತ್ರಣ ಮಾಡಬೇಕಲ್ಲಾ, ಹಾಗೆ ಈ ಮದುವೆಯ ಬಗ್ಗೆ ಚರ್ಚೆ ನಡೆಯುವಾಗ ಬಹಳ ಕಡಿಮೆ ಜನ ಇರತಕ್ಕಂಥಾದ್ದು ಇದು ಒಂದು ತರಹ ದಾರಿದೀಪವಾಗಿದೆ.

ಶ್ರೀ ಕೆ.ಆರ್. ರಮೇಶ್ ಕುಮಾರ್ : ಇದು ಸರಳೀಕರಣ ಮದುವೆ, ಹೆಚ್ಚು ಗಲಾಟೆ ಗದ್ದಲ ಇಲ್ಲ. ಮದುವೆ ಕೂಡ ಹೀಗೆ ಆಗಬೇಕೆಂಬುದು ನನ್ನ ಅಪೇಕ್ಷೆ. ವಿಶೇಷವಾಗಿ ರಾಜಕಾರಣಿಗಳು ಈ ನಿರ್ಬಂಧವನ್ನು ಹೇರಿಕೊಳ್ಳಬೇಕು. ಯಾರು ಎಲ್ಲಿ ತಪ್ಪು ಮಾಡಿದರೂ ಯಾರನ್ನು ಯಾರೂ ವ್ಯಾಖ್ಯಾ ಮಾಡುವುದಿಲ್ಲ. ಸಾಮಾನ್ಯವಾಗಿ ಎಲ್ಲಾ ಜನರ ವ್ಯಾಖ್ಯಾನ, ವಿಮರ್ಶೆಗೆ ಒಳಗಾಗತಕ್ಕಂಥವರು ಬಹಳ ಸುಲಭವಾಗಿ ಸಿಗುವವರು ನಾವು ರಾಜಕಾರಣಿಗಳು. ಇದಕ್ಕೆ ಕಾರಣ ಇಷ್ಟೆ, ನಾವು ಜನರ ಸ್ಕ್ರುಟಿನಿಗೆ ಒಳಪಡುತ್ತೇವೆಲ್ಲಾ, ಆದುದರಿಂದ ನಮ್ಮನ್ನು ಅನ್ನುವ ಸೌಭಾಗ್ಯ ಅವರಿಗೆ ನಾವು ಒದಗಿಸಿಕೊಡಬೇಕು ಮತ್ತು ಅವರ ಹತ್ತಿರವೇ ಪರವಾನಿಗೆಯಲ್ಲಿ ಹೋಗಬೇಕು. ಒಬ್ಬ ಆಫೀಸರ್ ಇದ್ದರೆ ಅವರನ್ನು ಯಾರೂ ಏನೂ ಅನ್ನುವುದಕ್ಕೆ ಆಗುವುದೇ ಇಲ್ಲ. ಈಗ ನಾನು ದುಬಾರಿ ಮದುವೆ ಮಾಡಿದೆ ಎಂದುಕೊಳ್ಳಿ ನನ್ನ ಕ್ಷೇತ್ರದಲ್ಲಿ ಒಂದು ನಾಲ್ಕು ಜನ ಪುಕಾರು ಎಬ್ಬಿಸಿದರೆ ಏನು ಗತಿ ನೋಡು ದೊಡ್ಡ ಮನುಷ್ಯ ಎಷ್ಟು ಜೋರಾಗಿ ಮದುವೆ ಮಾಡುತ್ತಿದ್ದಾನೆ ಪರವಾಗಿಲ್ಲ ಕಣಯ್ಯ ಅನುಕೂಲ ಮಾಡಿಕೊಂಡಿದ್ದಾನೆ ಎಂದರೆ ನನ್ನ ಮುಗಿಸುವುದಕ್ಕೆ ಅಷ್ಟೇ ಸಾಕು. ಈಗ ಒಬ್ಬ ಡಿವೈಎಸ್‌ಪಿ ದುಡ್ಡು ಹೊಡೆದಿದ್ದಾನೆ ಎಂದರೆ ಅವನು ದುಬಾರಿ ಮದುವೆ ಮಾಡಿದರೆ ಅವರ ಡಿ.ಜಿ. ಬಂದು ಬೊಕ್ಕೆ ಕೊಟ್ಟು ಹೋಗುತ್ತಾರೆ. ಅವರ ಸಿ.ಆರ್. ಗೆ ಏನೂ ತೊಂದರೆಯಾಗುವುದಿಲ್ಲ. ನಮ್ಮ ಸಿ,ಆರ್. ಬರೆಯುವವರು ಜನ. ಆದ್ದರಿಂದ ಈ ವ್ಯವಸ್ಥೆಯಲ್ಲಿ ಈ ಸಮಾಜದಲ್ಲಿ ಬಹಳ ಸುಲಭವಾಗಿ ಟೀಕೆಗೆ ಸಿಗುವವರು ವ್ಯಾಖ್ಯಾನಕ್ಕೆ ಒಳಪಡುವವರು. ಗುರಿಯಾಗುವವರು ನಾವು. ಆದರೆ ಸ್ವಯಂ ಶಿಸ್ತನ್ನು ನಾವು ಹೇರಿಕೊಳ್ಳೋಣ. ನಾವು ಇವರು ತಿಳಿದುಕೊಂಡಷ್ಟು ನಿರ್ಲಜ್ಜಿತರಲ್ಲ. ನಮಗೆ ಕೂಡ ಪಂಚೇಂದ್ರಿಯಗಳು ವ್ಯವಸ್ಥಿತವಾಗಿ ಕೆಲಸ ಮಾಡುತ್ತಿದ್ದಾವೆ. ಸಮಾಜದಲ್ಲಿ ಇರತಕ್ಕಂಥ ಕೆಲವು ಅವ್ಯವಸ್ಥೆಗಳ ಬಗ್ಗೆ ಈ ತರಹದ ಕೆಲವು ವಿಕಾರಗಳ ಬಗ್ಗೆ ನಮಗೂ ಕೂಡ ಕಳಕಳಿ ಇದೆ ಎಂದು ಜನರಿಗೆ ಮನದಟ್ಟು ಮಾಡಬೇಕಾದರೆ ಅವಶ್ಯಕವಾಗಿ ಈ ನಿರ್ಣಯವನ್ನು ಸದನ ಗೌರವಿಸಬೇಕಾಗುತ್ತದೆ ಎನ್ನುವ ಮಾತನ್ನು ಒತ್ತಾಯ ಪೂರ್ವಕವಾಗಿ ಹೇಳಿ ಬಹಳ ದೊಡ್ಡ ಮನಸ್ಸು ಮಾಡಿ ಅವಕಾಶ ಮಾಡಿಕೊಟ್ಟಿರಿ. ಇನ್ನು ಹೇಳುವುದು ಬಹಳ ಇದ್ದರೂ ಕೂಡ ಸಮಯದ ಅಭಾವವಿರುವುದರಿಂದ ನಾನು ಹೇಳುವುದಕ್ಕೆ ಆಗದೇ ಮುಖ್ಯವಾಗಿ ತಿಳಿಸಬೇಕಾದಂತಹ ತಿಳಿಸುವಂತಹ ಪ್ರಯತ್ನವನ್ನು ಮಾಡಿ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು : ಈಗ ಐದು ಗಂಟೆಗೆ ಬಹಳ ಮುಖ್ಯವಾದ ಸಭೆ ಇದೆ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಅಧ್ಯಕ್ಷರೆ, ನಾನು ಈ ದಿನ ಆರಂಭ ಮಾಡಿ ಬಿಟ್ಟುಬಿಡುತ್ತೇನೆ. ಮತ್ತೆ ಮುಂದಿನ ಶುಕ್ರವಾರ ಮಾತನಾಡುತ್ತೇನೆ. ಈ ಮದುವೆ ನಿರ್ಣಯ ಏನು ಬಂದಿದೆ ಈ ನಿರ್ಣಯ ಬಹಳ ಒಳ್ಳೆಯ ಸಮಯೋಚಿತವಾದಂತಹ ನಿರ್ಣಯ. ಈ ನಿರ್ಣಯದ ಬಗ್ಗೆ ನಾನಾ ದಿಕ್ಕಿನಲ್ಲಿ ಚರ್ಚೆಯಾಗಬೇಕಾಗಿದೆ. ವೈಭವೀಕರಣದ ಬಗ್ಗೆ ಮದುವೆ ವ್ಯವಸ್ಥೆ ಬಗ್ಗೆ, ಕಂದಾಚಾರಗಳ ಬಗ್ಗೆ, ಚರ್ಚೆಯಾಗಬೇಕಾಗಿದೆ. ಸಂಸ್ಕಾರಗಳು, ಅನೇಕ ರೂಪುರೇಖೆಗಳು ಈ ಮದುವೆಗೆ ಇದೆ. ನಾನಾ ದಿಕ್ಕು ನಾನಾ ಮುಖಗಳು ಇದೆ. ಎಲ್ಲಾ ಮುಖಗಳ ಬಗ್ಗೆ ಮಾತನಾಡಬೇಕಾದ್ದು ಇದೆ ಆದರ್ಶದ ಮದುವೆ ಎಂದರೆ ಏನು ? ಸಾಮಾನ್ಯ ಮದುವೆ ಎಂದರೆ ಏನು ? ಪ್ರೀತಿಸಿ ಆಗತಕ್ಕಂಥ ಮದುವೆ, ಮದುವೆ ಆದಮೇಲೆ ಆಗತಕ್ಕಂಥ ದುರಂತಗಳು ಏನು ? ಇಂಥ ಅನೇಕ ವಿಷಯಗಳ ಬಗ್ಗೆ ಬೆಳಕನ್ನು ಚೆಲ್ಲುವುದಕ್ಕೆ ನಾನು ನಿಂತಿದ್ದೇನೆ. ಅದನ್ನು ಮುಂದಿನ ಶುಕ್ರವಾರ ಮುಂದುವರೆಸುತ್ತೇನೆ. ಮಾನ್ಯ ಅಧ್ಯಕ್ಷರೆ ಒಂದು ನಿಮಿಷ.....